## 68

# ತಪ್ಪನ್ನು ಒಪ್ಪಿಕೊಳ್ಳುವದು ಹೇಗೆ

## (21:40-22:29)

ತಪ್ಪನ್ನು ಒಪ್ಪಿಕೊಳ್ಳುವ ಕುರಿತಾಗಿ ಆಲೋಚಿಸುವಾಗ, ನನ್ನ ಮತ್ತು ನನ್ನ ಸಹೋದರನಾದ ಕಾರ್ಯ್‌ನ ನಡುವೆ ಉಂಟಾದ ಘಟನೆಯನ್ನು ನೆನಪು ಮಾಡಿಕೊಳ್ಳುತ್ತೇನೆ. ನಾವು ಪರಸ್ಪರ ಬೈದಾಡಿಕೊಳ್ಳುವಾಗ, ನಮ್ಮ ತಾಯಿಯು ಮಧ್ಯೆ ಪ್ರವೇಶಿಸುತ್ತಿದ್ದರು. ನಮ್ಮಿಬ್ಬರನ್ನು ಮುಖಾಮುಖಿ ನಿಲ್ಲಿಸಿ "ತಪ್ಪಾಯಿತು" ಎಂದು ಒಪ್ಪಿಕೊಳ್ಳಿ ಎನ್ನುತ್ತಿದ್ದರು. ನಾವಿಬ್ಬರೂ ಮೊಣಕಾಲೂರಿ ಬೇರೆಕಡೆಗೆ ಗಮನವಿರಿಸಿ "ನನ್ನನ್ನು ಮನ್ನಿಸು" ಎಂದು ಹೇಳುತ್ತಿದ್ದೇವು. ಕೆಲವು ಸಾರಿ ತಾಯಿಯು ನಾವಿಬ್ಬರೂ ಹಸ್ತಲಾಘವ ನೀಡುವಂತೆ ಮಾಡುತ್ತಿದ್ದರು. ಒಂದು ವೇಳೆ ನಾವು ಈ ವಿಷಯದಲ್ಲಿ ಕಠಿಣವಾಗಿ ವರ್ತಿಸಿದರೆ ತಾಯಿಯು ನಮಗೆ ಅಪ್ಪಣೆಯನ್ನು ನೀಡಿ ಒಬ್ಬರಿಗೊಬ್ಬರು "ತಬ್ಬಿಕೊಳ್ಳಿ" ಎನ್ನುತ್ತಿದ್ದರು! ನಾವು ಮನಸ್ಸಿಲ್ಲದೆ ಪರಸ್ಪರ ಪಕ್ಕದಲ್ಲಿ ನಿಂತು, ನಮ್ಮ ಕೈಗಳನ್ನು ಹಾಕಿ, ಸಣ್ಣದಾಗಿ ಒತ್ತಿನಿಲ್ಲುತ್ತಿದ್ದೆವು. ಕೆಲವು ಸಾರಿ ಅವನಾಗಲೀ ಅಥವಾ ನಾನಾಗಲೀ ಒಳಗೆ ನಗುತ್ತಿದ್ದವು ಆಗ ಎಲ್ಲವು ಸಮಾಧಾನಕರವಾಗುತ್ತಿತ್ತು.

ನಮ್ಮಲ್ಲಿ ಅನೇಕರು, "ನನ್ನನ್ನು ಮನ್ನಿಸು" ಎಂಬ ವಿಚಾರದಿಂದ ಮುಂದೆ ಹೋಗುವದಿಲ್ಲ. ಕೆಲವರು, ಇಂತಹ ಸರಳ ಪದಗಳನ್ನು ಬಳಸುವದಿಲ್ಲ. ಕೆಲವು ಸಾರಿ ನಮ್ಮ ತಪ್ಪೊಪ್ಪಿಕೆಯು, ಚಿಕ್ಕ ಬಾಲಕನಿಗೆ ತಿಂಡಿಯನ್ನು ದೊರಕಿಸಿಕೊಳ್ಳಬೇಕೆಂದರೆ, ಅವನು "ಮನ್ನಿಸು" ಎಂದು ಹೇಳುವಂತೆ ಗುಣಗುಟ್ಟುತ್ತಾ: "ನದಿಯಲ್ಲಿ ಹೋಗಿ ಮುಳುಗು ಎಂದು ಹೇಳಿದ್ದೇನು, ಆದರೆ ಅದನ್ನು ಮಾಡಬೇಡ ... ಎಂಬುದಾಗಿ ಹೇಳಿದಂತಿರುತ್ತದೆ!"

ಈ ಪಾಠದಲ್ಲಿ, ಈ ವಿಧವಾದ ತಪ್ಪು ಒಪ್ಪಿಗೆಯ ಕುರಿತು ತಿಳಿಸುತ್ತಿರುವದಿಲ್ಲ - ಆ ವಿಧದ ಅಗತ್ಯವೂ ಇರುವದಿಲ್ಲ. ತಪ್ಪೊಪ್ಪಿಕೊಳ್ಳುವ ಕುರಿತು *ಸತ್ಯವೇದವು ತಿಳಿಸುವದನ್ನು* ಕಲಿಯೋಣ. 22:1ರಲ್ಲಿ ಪೌಲನು "ಸಹೋದರರೇ, ತಂದೆಗಳೇ, ಈಗ ನಾನು ನಿಮಗೆ ಮಾಡುವ ಪ್ರತಿವಾದವನ್ನು ಕೇಳಿರಿ ಎಂದು ಕೂಗಿಹೇಳಿದನು." "ಪ್ರತಿವಾದ" ಎಂಬ ಪದವನ್ನು ಗ್ರೀಕ್ ಭಾಷೆಯಲ್ಲಿ *"ಅಪೊಲಾಜಿಯಾ"*[1] ಎನ್ನುವರು. "ಅಪಾಲಾಜಿ" ಎಂಬುದರ ಅರ್ಥ ತಪ್ಪುಗಳನ್ನು ಒಪ್ಪಿಕೊಂಡು ಕ್ಷಮಾಪಣೆ ಬೇಡು ಎಂಬುದಾಗಿರದೇ, "ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರೆಲ್ಲರಿಗೆ ಉತ್ತರ ಹೇಳುವದಕ್ಕೆ ಯಾವಾಗಲೂ ಸಿದ್ಧವಾಗಿರ್ರಿ" (1 ಪೇತ್ರ 3:15ಬಿ)[2] ಎಂಬುದು ಪೇತ್ರನ ಉತ್ತರವಾಗಿರುತ್ತದೆ. ಅಪೊಸ್ತಲರ ಕೃತ್ಯದಲ್ಲಿ *ಪ್ರತಿವಾದ* ಎಂಬ ಪದವನ್ನು ಎಂಟು ಸಾರಿ ಉಲ್ಲೇಖಿಸಲಾಗಿದೆ. ಅಧ್ಯಾಯ 22ರಿಂದ 26ರವರೆಗಿನ[3] ವಾಕ್ಯದಲ್ಲಿ ಏಳು ಸಾರಿ ಈ ಪದಪ್ರಯೋಗಮಾಡಲಾಗಿದೆ, ಯೆಹೂದ್ಯರು ಹಾಗೂ ರೋಮಾಯರ[4] ಮುಂದೆ ಪೌಲನು ಮಾತನಾಡುವಾಗ ಈ ಪ್ರತಿಪಾದನೆಯನ್ನು ಮಾಡಿರುವನು, ಅನ್ಯರ ಮುಂದೆ ನಾವುಗಳು ಮಾಡುವ ಪ್ರತಿವಾದಕ್ಕೆ ಇದನ್ನು ಹೋಲಿಸಿ ಕೊಳ್ಳೋಣ.

### ಪೌಲನ ಪ್ರತಿವಾದ

ಹಿಂದಿನ ಪಾಠವನ್ನು ಅಂತ್ಯಗೊಳಿಸುವಾಗ ದೇವಾಲಯದಲ್ಲಿದ್ದ ದೊಂಬಿಯ ಜನರ ಮಧ್ಯದಿಂದ ರೋಮಾಯದ ಅಧಿಕಾರಿಗಳು ಪೌಲನನ್ನು ಕಾಪಾಡಿದರು. ಪೌಲನು ಅಂತೋನಿಯ ಕೋಟೆಗೆ[5] ಒಯ್ಯಲ್ಪಡುವಾಗ ಅವನು ಅಧಿಕಾರಿಗಳೊಂದಿಗೆ ಮಾತನಾಡಿ, "ಈ

ಜನರಿಗೆ ಕೆಲವು ಮಾತುಗಳನ್ನು ಹೇಳುವದಕ್ಕೆ ನನಗೆ ಅಪ್ಪಣೆಯಾಗಬೇಕೆಂದು ಕೇಳಿಕೊಳ್ಳುತ್ತೇನೆ ಅಂದನು" (21:39ಬಿ). ಒಂದು ವೇಳೆ ನಾನು ಈ ಅರೆಜೀವದ ಪರಿಸ್ಥಿತಿಯಲ್ಲಿದ್ದರೇ, "ನನ್ನನ್ನು ಇಲ್ಲಿಂದ ಹೊರಕ್ಕೆ ಒಯ್ಯಿರಿ! ಈ ಜನರ ಗುಂಪಿನಿಂದ ದೂರ ಮಾಡಿರಿ ಎಂದು ಹೇಳುತ್ತಿರಬಹುದು." ಆದರೆ ಪೌಲನು, "ನಾನು ಅವರೊಂದಿಗೆ ಮಾತನಾಡುವೆನು" ಅಂದನು.[6] ಅದಕ್ಕೆ ಸಹಸ್ರಾಧಿಪತಿಯು ಅಪ್ಪಣೆ ನೀಡಿದನು (21:40ಎ). ಇದರಿಂದ ಅಧಿಕಾರಿಯು ಗೊಂದಲಕ್ಕೆ ಸತ್ಯಾಂಶವನ್ನರಿಯಲು ಸಾಧ್ಯತೆಯಿತ್ತು.

**ಯೆಹೂದ್ಯರ ಮುಂದೆ ಅವನು ಮಾಡಿದ ಪ್ರತಿವಾದ (21:40-22:23)**

ಪೌಲನು ಮೆಟ್ಲುಗಳ ಮೇಲೆ ನಿಂತಿರುವಾಗ, ಅವನ ಅಕ್ಕಪಕ್ಕದಲ್ಲಿ ಸಿಪಾಯಿಗಳು ನಿಂತಿದ್ದರು, ಕೆಳಭಾಗದಲ್ಲಿ ಜನರು ಸಭೆಯಾಗಿ ಕೂಡಿಬಂದಿದ್ದರು. ಅವನ ಹರಿದುಹೋದ ಉಡುಪುಗಳು ರಕ್ತ ಹಾಗೂ ಧೂಳಿನಿಂದ ತುಂಬಿದ್ದು, ಮುಖದ ಮೇಲೆ ಗಾಯಗಳಾಗಿದ್ದವು. ಆದಾಗ್ಯೂ ಅವನು ದೈವಿಕವಾದ ಗೌರವವನ್ನು ಹೊಂದಿದವನಾಗಿ ತನ್ನ ಕೈಗಳನ್ನು ಮೇಲೆತ್ತುವ ಮೂಲಕ ಜನರ ಲಕ್ಷವನ್ನು ತನ್ನೆಡೆಗೆ ಸೆಳೆದುಕೊಂಡನು.

> ಸಹಸ್ರಾಧಿಪತಿಯು ಅಪ್ಪಣೆ ಕೊಡಲು ಪೌಲನು ಮೆಟ್ಲುಗಳ ಮೇಲೆ ನಿಂತುಕೊಂಡು ಜನರಿಗೆ ಕೈಸನ್ನೆಮಾಡಿದನು.[7] ಗದ್ದಲವು ಬಹಳ ಮಟ್ಟಿಗೆ ಶಾಂತವಾದ ಮೇಲೆ ಅವನು ಇಬ್ರಿಯ ಭಾಷೆಯಲ್ಲಿ[8] - ಸಹೋದರರೇ, ತಂದೆಗಳೇ,ಈಗ ನಾನು ನಿಮಗೆ ಮಾಡುವ ಪ್ರತಿವಾದವನ್ನು ಕೇಳಿರಿ ಎಂದು ಕೂಗಿ ಹೇಳಿದನು.[9]
>
> ಅವನು ತಮ್ಮ ಸಂಗಡ ಇಬ್ರಿಯ ಭಾಷೆಯಲ್ಲಿ ಮಾತಾಡುವದನ್ನು ಕೇಳಿ ಅವರು ಮತ್ತೂ ನಿಶ್ಶಬ್ದವಾದರು (21:40ಬಿ - 22:2ಎ).

ಸಹಸ್ರಾಧಿಪತಿಯೊಂದಿಗೆ ಪೌಲನು ಗ್ರೀಕ್[6] ಭಾಷೆಯಲ್ಲಿ ಮಾತನಾಡಿದರೂ (21:37), ತನ್ನವರೇ ಆದ ಯೆಹೂದ್ಯರೊಂದಿಗೆ ಪೌಲನು ಅವರ ಸ್ಥಳೀಯ ಭಾಷೆಯಲ್ಲಿ[10] ಮಾತನಾಡಿದನು. ಅವರನ್ನು "ಸಹೋದರರೇ"[11] ಹಾಗೂ "ತಂದೆಗಳೇ" ಎಂದು ಕರೆಯುವಲ್ಲಿ ಅವರನ್ನು ತನ್ನ ಕುಟುಂಬವೆಂದು ಅಂಗೀಕರಿಸಿದನು. ತನ್ನ ಕೇಳುಗರೊಂದಿಗೆ ತನ್ನನ್ನು ಗುರುತಿಸಿಕೊಂಡು ಪ್ರತಿವಾದ ಮಾಡಿದನು.

ಅವರನ್ನು ಅವನು ಅರ್ಥ ಮಾಡಿಕೊಂಡಿದ್ದನು. ಎಂದು ಅವರು ತಿಳಿಯಲಪೇಕ್ಷಿಸಿದನು[12] ಅವರ ಹಾಗೆಯೇ, ಧರ್ಮಶಾಸ್ತ್ರವನ್ನು ಗೌರವದಿಂದ ಕಾಣಲು ಬೆಳೆಸಲ್ಪಟ್ಟಿದ್ದನು. ಸುಮಾರು 20 ವರ್ಷಗಳಿಂದ ಅವನು ಯೆರೂಸಲೇಮಿನಲ್ಲಿ ವಾಸಿಸದೇ ಇದ್ದದ್ದರಿಂದ ಅನೇಕರು ಅವನನ್ನು ವೈಯಕ್ತಿಕವಾಗಿ ಅರಿತಿರಲಿಲ್ಲ, ಅವನು ತನ್ನ ಯೆಹೂದತ್ವವನ್ನು ತೋರ್ಪಡಿಸಿದು. "ನಾನು ಯೆಹೂದ್ಯನು," "ಕಿಲಿಕ್ಯದ ತಾರ್ಸದಲ್ಲಿ" ಹುಟ್ಟಿದವನು (22:3ಎ).[13] ಅವನು ತಾರ್ಸದಲ್ಲಿ ಹುಟ್ಟಿದವನಾಗಿದ್ದರೂ, ಮಾನಸಿಕವಾಗಿ ಅವನು ಅನ್ಯನಾಗಿರಲಿಲ್ಲ. ಎಂದು ತನ್ನ ಕೇಳುಗರಿಗೆ ತಿಳಿಸಿದನು, ಯೆರೂಸಲೇಮಿನಲ್ಲಿ ಬೆಳೆದವನು ಅಂದನು (22:3ಬಿ) ಆ ಪಟ್ಟಣದಲ್ಲಿಯೇ ಗಮಲಿಯೇಲನ ಪಾದ[14] ಸನ್ನಿಧಿಯಲ್ಲಿ ಪಿತೃಗಳ ಧರ್ಮಶಾಸ್ತ್ರದಲ್ಲಿ ಪೂರ್ಣ ಶಿಕ್ಷಿತನಾದವನು ಅಂದನು (22:3ಸಿ). ಐದು ವರ್ಷಗಳ ಹಿಂದೆಯೇ ಗಮಲಿಯೇಲನು ಮರಣ ಹೊಂದಿದ್ದನು, ಅವನು ಮಹತ್ವದ ಬೋಧಕನಾಗಿದ್ದನು.[15] ಪೌಲನ ಧಾರ್ಮಿಕತೆಯನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ.

ಪೌಲನು ತನಗುಂಟಾದ ಅಪವಾದಗಳಿಗೆ ನೇರವಾದ ಪ್ರತಿಕ್ರಿಯೆಯನ್ನು ನೀಡದಿದ್ದರೂ, ಅವುಗಳಲ್ಲಿ ಯಾವುದೇ ಸತ್ಯಾಂಶ ಇಲ್ಲ ಎಂಬುದನ್ನು ಸೂಚಿಸಿದನು. ಅವನಿಗುಂಟಾದ ಆರೋಪಗಳೇನೆಂದರೆ (1) ಯೆಹೂದ್ಯ ಜನರಿಗೆ ವಿರುದ್ಧವಾಗಿ ಪ್ರಸಂಗಿಸುತ್ತಿದ್ದನು,

ಮತ್ತು (2) ಧರ್ಮಶಾಸ್ತ್ರಕ್ಕೆ ಅಗೌರವ ಮಾಡಿದ್ದನು (21:28). ಪೌಲನು ತನ್ನ ಪ್ರಾರಂಭದ ಮಾತುಗಳಲ್ಲಿ, "ನೀವೆಲ್ಲರೂ ಈ ಹೊತ್ತು ದೇವರ ವಿಷಯದಲ್ಲಿ ಅಭಿಮಾನಿಗಳಾಗಿರುವಂತೆಯೇ ನಾನು ಅಭಿಮಾನಿಯಾಗಿದ್ದನು ಅಂದನು!"

"ಧರ್ಮಶಾಸ್ತ್ರದಲ್ಲಿ ಪೂರ್ಣ ಶಿಕ್ಷಿತನಾಗಿದ್ದರಿಂದ" ಪೌಲನು ದೇವರ ಅಭಿಮಾನಿಯಾಗಿದ್ದನು (22:3ಡಿ) - ಅವನ ಅಭಿಮಾನದ ಕುರಿತು ಬೇಗನೇ ಹೇಳುವದಕ್ಕಿದ್ದನು. ಅದರ ಮೊದಲು, "ನೀವೆಲ್ಲರೂ ಈ ಹೊತ್ತು ಅಭಿಮಾನಿಗಳಾಗಿರುವಂತೆಯೇ" ಎಂಬ ಆಶ್ಚರ್ಯದ ಪದಗಳ ಪ್ರಯೋಗ ಮಾಡಿದನು (22:3ಸಿ). ಕೆಲವು ಕ್ಷಣಗಳ ಹಿಂದೆ ಅವನು ತನ್ನನ್ನು ಹಿಂಸಿಸಿದ ಜನರನ್ನೆ ಈಗ ಉದ್ದೇಶಿಸಿ ಅವರನ್ನು ದೇವರ ಅಭಿಮಾನಿಗಳು ಎಂದು ಶುಭಕೋರಿದನು![16]

ಅವರು ಅವನನ್ನು ಕೊಲ್ಲುವ ಉದ್ದೇಶವನ್ನು ತಿಳಿಸಿದನು ಯಾಕಂದರೆ ಈ ಹಿಂದೆ, ಕ್ರೈಸ್ತರಾಗಿ ಪರಿವರ್ತನೆಗೊಂಡ ಯೆಹೂದ್ಯರ ವಿಷಯದಲ್ಲಿ ಪೌಲನು ಈ ವಿಧವಾದ ಆಲೋಚನೆಯನ್ನೇ ಮಾಡಿದ್ದನು:

> ಕ್ರಿಸ್ತ ಮಾರ್ಗದವರನ್ನು ಹಿಂಸಿಸುವವನಾಗಿ ಗಂಡಸರಿಗೂ ಹೆಂಗಸರಿಗೂ ಬೇಡಿ ಹಾಕಿಸುತ್ತಾ ಅವರನ್ನು ಸೆರೆಮನೆಗಳಿಗೆ ಕೊಡಿಸುತ್ತಾ ಇದ್ದೆನು, ಅವರ ಕೊಲೆಗಾದರೂ ಹಿಂತೆಗೆಯಲಿಲ್ಲ. ಈ ವಿಷಯದಲ್ಲಿ ಮಹಾ ಯಾಜಕನೂ ಹಿರೀ ಸಭೆಯವರೆಲ್ಲರೂ[17] ಸಾಕ್ಷಿಗಳಾಗಿದ್ದಾರೆ.[18] ಅವರಿಂದಲೇ ನಾನು ದಮಸ್ಕದಲ್ಲಿದ್ದ ಸಹೋದರರಿಗೆ ಕಾಗದಗಳನ್ನು ತೆಗೆದುಕೊಂಡು[19] ಅಲ್ಲಿಗೆ ಹೋದವರನ್ನೂ ಬೇಡಿಗಳಿಂದ ದಂಡನೆಗಾಗಿ ಯೆರೂಸಲೇಮಿಗೆ ತರಬೇಕೆಂದು ಹೊರಟೆನು (22:4, 5).[20]

ನಂತರ ಪೌಲನು ಅವನನ್ನು ಜನರು ಅರ್ಥಮಾಡಿಕೊಳ್ಳಬೇಕೆಂದು *ಮನವಿ ಮಾಡಿದನು.* ದಮಸ್ಕದ ದಾರಿಯಲ್ಲಿ, ಅವನು ಇಷ್ಟಪಡದ, ಯೇಸುವಿನ ಅನುಯಾಯಿಯಾದನು - ಆದರೆ ಆ ದಾರಿಯಲ್ಲಿ ಆಶ್ಚರ್ಯವಾದ ಸಂಗತಿ ಜರುಗಿತು. ಅವನು ಕರ್ತನನ್ನು ಹುಡುಕಿ ಕೊಂಡು ಹೋಗದಿದ್ದರೂ, ಕರ್ತನೇ ಅವನನ್ನು ಹುಡುಕಿಕೊಂಡು ಬಂದಿದ್ದನು.

> ನಾನು ಪ್ರಯಾಣ ಮಾಡುತ್ತಾ ದಮಸ್ಕದ ಹತ್ತರಕ್ಕೆ ಬಂದಾಗ ಸುಮಾರು ಮಧ್ಯಾಹ್ನದಲ್ಲಿ ಫಕ್ಕನೆ ಆಕಾಶದೊಳಗಿಂದ ಒಂದು ದೊಡ್ಡ ಬೆಳಕು ನನ್ನ ಸುತ್ತಲು ಹೊಳೆಯಿತು, ನಾನು ನೆಲಕ್ಕೆ ಬಿದ್ದೆನು. ಆಗ - ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆಪಡಿಸುತ್ತೀ? ಎಂದು ನನಗೆ ಹೇಳಿದ ಒಂದು ಶಬ್ದವನ್ನು ಕೇಳಿದೆನು. ಅದಕ್ಕೆ ನಾನು - ಕರ್ತನೇ, ನೀನಾರು? ಎಂದು ಕೇಳಲು ಆತನು - ನೀನು ಹಿಂಸೆಪಡಿಸುವ ನಜರೇತಿನ ಯೇಸುವೇ ನಾನು ಎಂದು ನನಗೆ ಹೇಳಿದನು.[21] ನನ್ನ ಜೊತೆಯಲ್ಲಿದ್ದವರು ಬೆಳಕನ್ನು ಕಂಡರೇ ಹೊರತು ನನ್ನ ಸಂಗಡ ಮಾತಾಡಿದವನ ಶಬ್ದವನ್ನು ಕೇಳಲಿಲ್ಲ (22:6-9).

ಯೆರೂಸಲೇಮಿನಿಂದ ದಮಸ್ಕದವರೆಗೆ ಪೌಲನ ಸಂಗಡ ಪ್ರಯಾಣ ಮಾಡಿದ ಕೆಲವರು ಇನ್ನೂ ಯೆರೂಸಲೇಮಿನಲ್ಲಿ ಇದ್ದದ್ದರಿಂದ, ಅವನ ಹೇಳಿಕೆಯಲ್ಲಿ ಅಡಗಿದ್ದ ಸತ್ಯವನ್ನು ತುಲನೇ ಮಾಡುವ ಸಾಧ್ಯತೆ ಇತ್ತು. ಪೌಲನಲ್ಲಿ ಉಂಟಾದ ಮಹಾಪರಿವರ್ತನೆಯೇ ಅತಿ ಗುರುತರವಾದ ಸಂಗತಿಯಾಗಿತ್ತು. ಒಂದು ವೇಳೆ ಪೌಲನು ದರ್ಶನದಲ್ಲಿ ಯೇಸುವನ್ನು ಕಾಣದೆ ಹೋಗಿದ್ದರೆ, ಅವನ ಕೇಳುಗರು ಅವನಲ್ಲಾದ ಬದಲಾವಣೆಯನ್ನು ವಿವರಿಸಲು ಸಾಧ್ಯವಿತ್ತು?

ಪೌಲನು ತನ್ನ ವಿವರಣೆಯನ್ನು ವಿಸ್ತರಿಸಿ: "ಆಗ ನಾನು - ಕರ್ತನೇ, ನಾನೇನು ಮಾಡಬೇಕು?" ಅಂದನು (22:10ಎ). ಪಾಪ ಪ್ರಜ್ಞೆಯಿಂದ ಬಿಡುಗಡೆಗಾಗಿ ಮಾಡಿದ ಭಿನ್ನಹವಾಗಿತ್ತು: ಕರ್ತನೆ, ಸಂಧಾನ ಮಾಡಿಕೊಳ್ಳುವದಕ್ಕಾಗಿ ಏನು ಮಾಡಲಿ ನನ್ನ "ಅಪಾರ್ಥದ ಅಭಿಮಾನಕ್ಕೆ ಕ್ಷಮೆ ಇದೆಯೇ?" ಅದು ಇದಕ್ಕಿಂತಲೂ ಹೆಚ್ಚಾದ ಸಂಗತಿಯಾಗಿತ್ತು. ಈ ಅಂಶದವರೆಗೆ, ಪೌಲನು ಕೇವಲ ತಾನು ಏನಾಗಿದ್ದನೋ, ಅದನ್ನೇ ಅರಿತ್ತಿದ್ದನು, ಮತ್ತು ಅವನು ಎಲ್ಲಿಗೆ

ಹೋಗುತ್ತಿದ್ದನು, ಅವನ ಅಂತ್ಯ ಎಲ್ಲಿಯಾಗುತ್ತಿತ್ತು ಎಂಬುದನ್ನು ಮಾತ್ರ ಅರಿತ್ತಿದ್ದನು. ಇದ್ದಕ್ಕಿದ್ದ ಹಾಗೆ ಅವನ ಜೀವನದಲ್ಲಿ ಮಹತ್ತರದ ಮಾರ್ಪಾಟು ಉಂಟಾಯಿತು. ಅವನ ಸ್ವಾರ್ಥವು ನಾಶವಾಯಿತು, ಅವನ ಉದ್ದೇಶವು ಮುರಿದುಹೋಯಿತು ತನ್ನ ಭವಿಷ್ಯತ್ತಿಗಾಗಿ ಯಾವುದೇ ವಿಧವಾದ ಯೋಜನೆಯನ್ನು ಅವನು ಹಾಕಿಕೊಳ್ಳಲಿಲ್ಲ ಆದ್ದರಿಂದ ಅವನು ತನ್ನ ಮುಂದಿನ ಜೀವಿತದಲ್ಲಿ ಕರ್ತನೇ ನಾನೇನು ಮಾಡಲಿ? ಅಂದನು. ನಾವು ಇಂತಹ ಪ್ರಶ್ನೆಯನ್ನು ಕೇಳುವವರೆಗೂ, ಯೇಸು ನಮ್ಮ ಜೀವಿತಗಳಲ್ಲಿ ವ್ಯತ್ಯಾಸವನ್ನು ಉಂಟು ಮಾಡಲು ಸಾಧ್ಯವಿಲ್ಲ.

ಕರ್ತನು ಪೌಲನಿಗೆ, "ನೀನೆದ್ದು ದಮಸ್ಕದೊಳಗೆ ಹೋಗು, ಮಾಡುವದಕ್ಕೆ ನಿನಗೆ ನೇಮಿಸಿರುವದೆಲ್ಲಾ ಅಲ್ಲಿ ತಿಳಿಸಲ್ಪಡುವದು" ಎಂದು ಹೇಳಿದನು (22:10ಬಿ). ಅವನು ದಾರಿಯಲ್ಲಿ ಪರಿವರ್ತನೆಗೊಂಡನು. ಅವನಲ್ಲಿ ಅತಿಶಯೋಕ್ತಿಯಾದ ಸಂಗತಿಗಳು ಉಂಟಾದವು:

> ಆ ಬೆಳಕಿನ ಪ್ರಭಾವದಿಂದ ನನಗೆ ಕಣ್ಣು ಕಾಣದೆ ಇದ್ದದರಿಂದ ನನ್ನ ಜೊತೆಯಲ್ಲಿದ್ದವರು ನನ್ನನ್ನು ಕೈ ಹಿಡಿದು ದಮಸ್ಕದೊಳಕ್ಕೆ ಕರೆದು ಕೊಂಡು ಹೋದರು. ಅಲ್ಲಿ ಧರ್ಮಶಾಸ್ತ್ರಕ್ಕೆ ಸರಿಯಾಗಿ ನಡೆಯುವ ಸದ್ಭಕ್ತನೂ ಆ ಸ್ಥಳದ ಯೆಹೂದ್ಯರೆಲ್ಲರಿಂದ[22] ಒಳ್ಳೆಯವನೆಂದು ಹೆಸರು ಹೊಂದಿದವನೂ ಆಗಿದ್ದ ಅನನೀಯನೆಂಬವನು ನನ್ನ ಬಳಿಗೆ ಬಂದು ನಿಂತು - ಸಹೋದರನಾದ ಸೌಲನೇ, ನಿನಗೆ ಕಣ್ಣುಕಾಣಿಸಲಿ ಎಂದು ಹೇಳಿದನು. ಹೇಳಿದಾಕ್ಷಣವೇ ನನಗೆ ಕಣ್ಣು ಕಾಣಿಸಿತು, ನಾನು ಅವನನ್ನು ನೋಡಿದೆನು. ಆ ಮೇಲೆ ಅವನು - ನಮ್ಮ ಪಿತೃಗಳ ದೇವರು ತನ್ನ ಚಿತ್ತವನ್ನು ನೀನು ತಿಳುಕೊಳ್ಳುವದಕ್ಕೂ ಆ ನೀತಿವಂತನನ್ನು ನೋಡವದಕ್ಕೂ ಆತನ ಬಾಯಿಂದ ಒಂದು ಮಾತನ್ನು ಕೇಳುವದಕ್ಕೂ ನಿನ್ನನ್ನು ನೇಮಿಸಿದ್ದಾನೆ.[23] ನೀನು ಕಂಡು ಕೇಳಿದ್ದರ ವಿಷಯದಲ್ಲಿ ಎಲ್ಲಾ ಮನುಷ್ಯರ ಮುಂದೆ ಆತನಿಗೆ ಸಾಕ್ಷಿಯಾಗಿರಬೇಕು. ಈಗ ನೀನೇಕೆ ಸಾವಕಾಶಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು[24] (22:11-16).

ಪೌಲನು ಅನ್ಯರಿಗೆ ಸುವಾರ್ತೆಯನ್ನು ಸಾರಿದ ನಿಮಿತ್ತವಾಗಿ, ಯೆಹೂದ್ಯರು ಅವನನ್ನು ದ್ವೇಷಮಾಡಿದ್ದರು ಎಂಬುದನ್ನು ಅವನು ಅರಿತ್ತಿದ್ದನು,[25] ಅದು ಪೌಲನ ಯೋಜನೆಯಾಗಿರದೆ ದೇವರ ಯೋಜನೆ ಎಂಬುದನ್ನು ಜನರಿಗೆ ತಿಳಿಯಬಯಸಿದನು. ಅನನೀಯನ ಮೂಲಕ ದೇವರು ಈ ಸೂಚನೆಯನ್ನು ನೀಡಿದ್ದನು: *ನೀನು ಎಲ್ಲರಿಗೂ* ಸಾಕ್ಷಿಯಾಗಿರುವಿ (ಒತ್ತಿ ಹೇಳಿದ್ದು ನನ್ನದು). ಈಗ ಪೌಲನು ದೈವೀಕ ಸಮರ್ಪಣೆಯ ಸ್ಪಷ್ಟತೆಯನ್ನು ಹೊಂದಿದ್ದನು.

ಪೌಲನ ದಮಸ್ಕ ಹಾಗೂ ಅರಬ ಸ್ಥಾನದಲ್ಲಿ ವಾಸಿಸಿದ್ದನ್ನು ಹೊರತುಪಡಿಸಿ, ಪರಿವರ್ತನೆಗೊಂಡ ತಕ್ಷಣ ಪ್ರಥಮ ಪ್ರಯಾಣದಲ್ಲಿಯೇ ಯೆರೂಸಲೇಮಿಗೆ ಹಿಂದಿರುಗಿದನು (ಗಲಾತ್ಯ 1:18; ಅಪೊಸ್ತಲರ ಕೃತ್ಯಗಳು 9:26, 30):[26] "ಅನಂತರದಲ್ಲಿ ನಾನು ಯೆರೂಸಲೇಮಿಗೆ ಹಿಂತಿರುಗಿ ಬಂದು ದೇವಾಲಯದೊಳಗೆ ಪ್ರಾರ್ಥನೆ ಮಾಡುತ್ತಿದ್ದಾಗ, ಧ್ಯಾನ ಪರವಶನಾದೆನು" (ಅಪೊಸ್ತಲರ ಕೃತ್ಯಗಳು 22:17). ಅವನು "ಎಲ್ಲರಿಗೂ ಎಲ್ಲಾ ಸಂದರ್ಭದಲ್ಲೂ ಸುವಾರ್ತೆ ಸಾರಿದ" ಸಂಗತಿಯು ಅವನ ಮೇಲಿನ ಮೂರನೆಯ ಆರೋಪವಾಗಿತ್ತು (21:28). ಇದಕ್ಕೆ ವ್ಯತಿರಿಕ್ತವಾಗಿ, ಅವನು ಪರಿವರ್ತನೆಗೊಂಡು ಯೆರೂಸಲೇಮಿಗೆ ಬಂದಾಗ, ಮೊದಲನೆಯದಾಗಿ ದೇವಾಲ ಯವನ್ನು ಸಂದರ್ಶಿಸಿದನು. ಅಲ್ಲಿ ಅವನು ಪ್ರಾರ್ಥಿಸಿ, ಕರ್ತನನ್ನು ಕಂಡನು. ಎಂಥಾ ಮುಗ್ದನು ಸಹ, ಪೌಲನ ಮೇಲಿನ ಆರೋಪಗಳಲ್ಲಿ ಸತ್ಯವಿಲ್ಲ ಎಂಬುದನ್ನು ಗ್ರಹಿಸಲು ಸಾಧ್ಯವಿತ್ತು.

ಪೌಲನ ತನಗಾದ ದರ್ಶನದ ಕುರಿತು: "ಆತನು - ನೀನು ತ್ವರೆಪಟ್ಟು ಬೇಗನೆ ಯೆರೂಸಲೇಮಿನಿಂದ ಹೊರಟುಹೋಗು, ನನ್ನವಿಷಯದಲ್ಲಿ ನೀನು ಹೇಳುವ ಸಾಕ್ಷಿಯನ್ನು ಅವರು ಅಂಗೀಕರಿಸುವದಿಲ್ಲ, ಎಂದು ಹೇಳಿದನು" (22:18). ಪೇತ್ರನು ಶುದ್ಧಾ ಅಶುದ್ಧಾ

ಪ್ರಾಣಿಗಳ ದರ್ಶನವನ್ನು ನೋಡಿದಾಗ, ಉಂಟಾದಂತ ವಾಗ್ವಾದವನ್ನೇ ಪೌಲನು ಸಹ ಮಾಡಿದನು:[27]

> ಅದಕ್ಕೆ ನಾನು - ಕರ್ತನೇ, ಎಲ್ಲಾ ಸಭಾಮಂದಿರಗಳಲ್ಲಿ ನಿನ್ನ ಮಲೆ ನಂಬಿಕೆಯಿಟ್ಟವರನ್ನು ನಾನು ಸೆರೆಮನೆಯಲ್ಲಿ ಹಾಕಿಸುತ್ತಾ ಹೊಡಿಸುತ್ತಾ ಇದ್ದೆನೆಂಬದನ್ನು ಅವರೇ ತಿಳಿದಿದ್ದಾರೆ; ಮತ್ತು ನನ್ನ ಸಾಕ್ಷಿಯಾದ ಸ್ತೆಫನನ ರಕ್ತವು ಚೆಲ್ಲಿಸಲ್ಪಟ್ಟಾಗ ನಾನೂ ಹತ್ತರ ನಿಂತು ಒಪ್ಪಿಕೊಂಡು ಅವನನ್ನು ಕೊಂದವರ ವಸ್ತ್ರಗಳನ್ನು ಕಾಯುತ್ತಿದ್ದೆನಲ್ಲಾ ಅಂದೆನು (22:19, 20).

ಪೌಲನು ಅದಕ್ಕೆ ಪ್ರತಿಕ್ರಿಯೆ ನೀಡಿ, "ಕರ್ತನೇ, ಅವರು ನನ್ನ ಹಿಂದಿನ ಜೀವಿತದಲ್ಲಿನ ಚಟುವಟಿಕೆಗಳನ್ನು ಗಮನಿಸಿ, ನನ್ನ ಪರಿವರ್ತನೆಯ ಜೀವಿತದಿಂದ ಉಂಟಾದ ಸಾಕ್ಷಿಯನ್ನು ಕೇಳುವರು, ಎಂದು ಹೇಳಿದನು."

ಪೌಲನು ಇತರೆ ಸ್ಥಳಕ್ಕೆ ಹೋಗುವ ಬದಲು, ತನ್ನ ಜೊತೆಗಾರರಾದ ಯೆಹೂದ್ಯರೊಂದಿಗೆ ಯೆರೂಸಲೇಮಿನಲ್ಲಿಯೇ ಉಳಿಯಲು ಪ್ರಯತ್ನಿಸಿದನು, ಆದರೆ ಅವನ ಮೇಲೆ ಅರೋಪ ಮಾಡಿದ ಹಿಂದಿನ ಜನರು, ಪೌಲನ ಸಾಕ್ಷಿಯನ್ನು ಅಂಗೀಕರಿಸುವದಿಲ್ಲ ಅವರು ಅವನ್ನು ಕೊಲ್ಲುವರು ಎಂದು ಕರ್ತನು ತಿಳಿದಿದ್ದನು (9:29). ಪೌಲನ ಹಿಂಜರಿಕೆಗೆ, ದೇವರು ಯಾವುದೇ ವಿಧವಾದ ಪ್ರತಿಕ್ರಿಯೆಯನ್ನು ನೀಡಿದ್ದಿಲ್ಲ. "ನೀನು ಹೋಗು" ಅಂದನು (22:21ಎ). ನಂತರ ಕರ್ತನು ಅವನಿಗೆ ವಿಶೇಷವಾದ ಸೇವಾ ಕಾರ್ಯವನ್ನು ನೀಡಿದನು: "ನಾನು ನಿನ್ನನ್ನು ದೂರಕ್ಕೆ ಅನ್ಯ ಜನರ ಬಳಿಗೆ ಕಳುಹಿಸುತ್ತೇನೆ" ಅಂದನು (22:21ಬಿ).[28]

"ಅನ್ಯಜನರು" ಎಂಬ ಪದವನ್ನು ಪೌಲನು ತನ್ನ ವಿವರಣೆಯಲ್ಲಿ ತಿಳಿಸಿದನು. ಅನ್ಯಜನರ ಮಧ್ಯ ಆತನ ಕೆಲಸವನ್ನು ದೇವರು ಹೇಗೆ ಆಶೀರ್ವದಿಸಿದನು ಎಂಬುದನ್ನು ಹೇಳಲು ಬಯಸಿರಬಹುದು. ಆತನ ಪ್ರಸಂಗದ ಕೇಳುಗರಿಗೆ ಪುನರುತ್ಥಾನದ ಕರ್ತನನ್ನು ನಂಬಬೇಕೆಂದು ಉದ್ದೇಶಿಸಿರಬಹುದು. ಆ ಅವಕಾಶವು ಆತನಿಗೆ ಇರಲಿಲ್ಲ. ಪೌಲನು ಅನ್ಯಜನರು ಎಂದು ಹೇಳಿದಾಗ ಆ ಗುಂಪಿನವರು ಗೊಂದಲಕ್ಕಿಳಿದ್ದರು. "ಈ ಮಾತಿನ ತನಕ ಅವರು ಕೇಳುತ್ತಿದ್ದರು; ಆ ಮೇಲೆ ಇಂಥವನನ್ನು ಭೂಮಿಯಿಂದ ತೆಗೆದುಹಾಕಿ ಬಿಡು; ಇವನು ಬದುಕುವುದು ಯುಕ್ತವಲ್ಲವೆಂದು ಕೂಗಿ ಹೇಳಿದರು" (ವಚನ 22:22). ಮೂಲ ವಾಕ್ಯಭಾಗದಲ್ಲಿ "ಈ ಮಾತಿನ ತನಕ ಅವನು ಕೇಳುತ್ತಿದ್ದರು."[29]

"ಇಂಥವನನ್ನು ಭೂಮಿಯಿಂದ ತೆಗೆದುಹಾಕಿ ಬಿಡು;[30] ಇವನು ಬದುಕುವದು ಯುಕ್ತವಲ್ಲವೆಂದು ಕೂಗಿ ಹೇಳಿದರು" ಎಂದು ಲೂಕನು ತಿಳಿಸಿರುವನು (22:23). ಈ ಕ್ರಿಯೆಗಳ ಮೂಲವನ್ನು ನಾವು ಅರಿತಿರುವದಿಲ್ಲ. ಪೌಲನ ಮೇಲೆ ಕಲ್ಲನ್ನು ತೂರುವದಕೊಸ್ಕರ ಅವರು ವಸ್ತ್ರಗಳನ್ನು ಕಳಚಿರಬಹುದು (22:20), ಆದರೆ ಅವರು ದೂಳನ್ನು ಮಾತ್ರ ತೂರುತ್ತಾ ಇದ್ದರು (2 ಸಮುವೇಲ 16:13), ಅಥವಾ "ಅವರು ಮೃಗಗಳಂತೆ ವರ್ತಿಸಿದರು."[31] ಗೂಳಿಯು ತನ್ನ ಕಾಲಿನಿಂದ ದೂಳನ್ನು ಒಡೆಯುವಂತೆ[32] "ಅನ್ಯರು" ಎಂಬ ಉಚ್ಚಾರ ಮಾಡಿದಾಗ ಜನರು ಕ್ರೂರದಗೊಂಡರು ಎಂದು ನಾವು ತಿಳಿಯುವೆವು.[33]

ಪೌಲನ ಅನುಭವವನ್ನೇ, ಅನೇಕ ಪ್ರಸಂಗಿಗಳು ಹೊಂದಿರುವರು. ತನ್ನ ಕೇಳುಗರ ನೋಟವನ್ನು ಗಮನಿಸಿ, ಪ್ರಸಂಗಿಯು ತನ್ನ ಪ್ರಸಂಗದ ಪರಿಣಾಮವನ್ನು ಅರಿಯಬಹುದು. ನಂತರ ಅವನು ಒಂದು ಹೇಳಿಕೆಯನ್ನು ನೀಡಿದನು - ನಿರಪಾಯಕಾರಿಯಾದ ಮಾತಾಗಿರಬಹುದು - ಶೀರ್ಘವಾಗಿ ಅವರ ಮುಖಗಳು ಗಂಟಿಕ್ಕಿದ್ದವು.[34] ಅವರು ನಾಗರೀಕರಾಗದೆ ಅಥವಾ ಆ ಸಂಗತಿಯು ನ್ಯಾಯಬದ್ಧವಾಗಿದ್ದಿದ್ದರೆ, ಅವರು ಅವನನ್ನು ಹೊರಗೆ ಎಳೆದು ಕಲ್ಲೆಸೆಯಬಹುದಿತ್ತು.

ಕೇಳುಗರಿಗೆ ಇಲ್ಲಿ ಒಂದು ಪಾಠವಿದೆ. "ಅನ್ಯ" ಎಂಬ ಪದವನ್ನು ಪೌಲನ ಕೇಳುಗರು

ದ್ವೇಷಿಸುತ್ತಿದ್ದರು. ನಮಗೆ ಇಷ್ಟವಾಗದಂತ ಪದವನ್ನು ಸತ್ಯವೇದವು ತಿಳಿಸುತ್ತದೆಯೇ, ಅಥವಾ ಸಿಟ್ಟುಪಡಿಸುವ ವಿಚಾರವನ್ನು ಸತ್ಯವೇದವು ತಿಳಿಸುತ್ತದೆಯೋ? "ಅನ್ಯ" ಎಂಬ ಪದಕ್ಕೆ ವಿರೋಧವಾಗಿ ಯೆಹೂದ್ಯರಲ್ಲಿ ಸ್ವಾಭಿಮಾನ ಹಾಗೂ ಅಸಹನೆಯನ್ನು ನಾವು ಕಾಣುತ್ತೇವೆ. ನಮ್ಮನ್ನು ಘಾಸಿ ಪಡಿಸಿದ ಪದಗಳು, ನಮ್ಮ ಹೃದಯದ ಪರಿಸ್ಥಿತಿಯನ್ನು ತೋರಿಸುತ್ತದೆ.[35]

ಪ್ರಸಂಗಿಗಳಿಗೂ, ಒಂದು ಪಾಠವಿದೆ. ಪೌಲನ ಪ್ರಸಂಗವನ್ನು ಗಮನಿಸುವಾಗ ಅವನು ತನ್ನ ಕೇಳುಗರ ಮನಸ್ಸನ್ನು ನೋಯಿಸದ ರೀತಿಯಲ್ಲಿ ಮಾಡಿದನು. ಅವನು ಯೆಹೂದ್ಯರ ಮಾತಿನ ಶೈಲಿಯನ್ನೇ ಉಪಯೋಗಿಸಿದನು. ಅವರು "ಯೇಸುವಿನ" ಹೆಸರಿನ ಬದಲು "ಕರ್ತನು" ಎಂಬ ಪದ ಪ್ರಯೋಗ ಮಾಡಿದನು. ಅವನು ಅನನೀಯನು ಕ್ರೈಸ್ತನೆಂದಾಗಲೀ ಅಥವಾ ದೇವಾಲಯದಲ್ಲಿ ದರ್ಶನ ನೀಡಿ ದವನು "ಯೇಸುವೇ" ಎಂದಾಗ ಉಪಯೋಗಿ ಸಲಿಲ್ಲ. ಆದರೆ ಅವನು "ಅನ್ಯ" ಎಂಬ ಪದವನ್ನು ಏಕೆ ಉಪಯೋಗಿಸಿದನು? ಯಾಕೆಂದರೆ ಅಪರಾದಕ್ಕೂ ಹಾಗೂ ಸಂಧಾನಕ್ಕೂ ನಡುವೆ ವ್ಯತ್ಯಸವಿದೆ. ಪೌಲನು, ಸಾಧ್ಯವಾದಷ್ಟು ಯೆಹೂದ್ಯರನ್ನು ಹೀನೈಸಿ ಮಾತನಾಡಲಿಲ್ಲ, ಆದಾಗ್ಯೂ ರಾಜೀ ಮಾಡಿಕೊಳ್ಳಲಿಲ್ಲ. ಕರ್ತನು ಅವನಿಗೆ, "ನಾನು ನಿನ್ನನ್ನು ದೂರಕ್ಕೆ ಅನ್ಯಜನರ ಬಳಿಗೆಕಳುಹಿಸುತ್ತೇನೆ" ಎಂದು ಹೇಳಿದ್ದನು, ಪೌಲನು ಈ ವರದಿಯನ್ನು ತಿಳಿಸಿರುವನು. ನೀವು ಉಪದೇಶ ಮಾಡುವಾಗ, ನಿಮ್ಮ ಕೇಳುಗರನ್ನು ಎದುರಾಳಿಗಳನ್ನಾಗಿ ಮಾಡಿಕೊಳ್ಳಬಾರದು. ಮನುಷ್ಯರನ್ನು ಮೆಚ್ಚಿಸಲು ಅಪೇಕ್ಷಿಸುವವರು, ಬೆಲೆಯುಳ್ಳ ವಾಕ್ಯದ ಪದವನ್ನು ಬಳಸುವದಿಲ್ಲ; ಆದರೆ ಅದು ದೇವರ ವಾಕ್ಯವಾಗಿದೆ, ದೇವರನ್ನು ಮೆಚ್ಚಿಸಲು ಅಪೇಕಿಸುವವರು ಏನೇ ಆದರೂ ಸತ್ಯವನ್ನು ಪ್ರಸಂಗಿಸುವರು (ಗಲಾತ್ಯ 1:10).

**ರೋಮಾಯರ ಮುಂದೆ ಪೌಲನ ಮಾಡಿದ ಪ್ರತಿವಾದ (22:24-29)**

ಪೌಲನ ಮಾತುಗಳ ಮೂಲಕವಾಗಿ ರೋಮಾಯ ಅಧಿಕಾರಿಗಳು ತಪ್ಪನ್ನು ಕಂಡುಹಿಡಿಯಲು ಅಸಾಧ್ಯವಾಯಿತು. ಒಂದು ವೇಳೆ ಅವನು ಅರಮಾಯ ಭಾಷೆಯನ್ನು ಅರ್ಥಮಾಡಿಕೊಳ್ಳದಾದರೂ, ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದರೂ[36] "ಅನ್ಯ" ಎಂಬ ಪದದಿಂದ ಗೊಂದಲವೇಕೆವುಂಟಾಯಿತೆಂದು ಆಶ್ಚರ್ಯಪಟ್ಟನು. ಪೌಲನ ಆರಂಭದ ಮಾತಿಗಿಂತಲೂ ಅಂತ್ಯದ ಸಮಯದಲ್ಲಿ ಅಧಿಕಾರಿಯು ಮೌನಗೊಂಡಿದ್ದನು.

ಹತಾಶೆಗೊಂಡಾಗ, ಸಹಸ್ರಾಧಿಪತಿಯು ಅವನನ್ನು ಕೋಟೆಯೊಳಗೆ ಕಳಿಸಿದನು (ವಚನ 24ಎ). ಅವನಿಗೆ ವಿರುದ್ಧವಾಗಿ ಕೂಗಾಡುತ್ತಾರೆಂಬದನ್ನು ಸಹಸ್ರಾಧಿಪತಿಯು ತಿಳುಕೊಳ್ಳುವದಕ್ಕಾಗಿ ಅವನನ್ನು ಕೋಟೆಯೊಳಗೆ ತಂದು ಕೊರಡೆಗಳಿಂದ ಹೊಡೆದು ವಿಚಾರಿಸಬೇಕೆಂದು ಆಜ್ಞಾಪಿಸಿದನು (ವಚನ 24ಬಿ). ಇದು ರೋಮಾಯರ ಸಹಜ ಶಿಕ್ಷೆಯಾಗಿತ್ತು. ಅಪರಾಧಿಗಳಿಗೆ ಏಟನ್ನು ನೀಡವ ಮೂಲಕ, ಅವರಿಂದ ಸತ್ಯ ಹೊರಗೆಳೆ ಯಬಹುದೆಂದು ಅವರು ಬಯಸಿದ್ದರು.[37]

ಕೊರಡೆಗಳಿಂದ ಹೊಡೆಯುವದು, ಕ್ರೂಜೆಯ ನಂತರದ ಶಿಕ್ಷೆಯಾಗಿತ್ತು. ಒಂದು ಮರದ ಕೋಲಿಗೆ ಚರ್ಮದ ಐದು ಚಾಟಿಗಳನ್ನು ಕಟ್ಟಿರುತ್ತಿದ್ದರು. ಆ ಚಾಟಿಗಳಿಗೆ ಮೂಳೆಗಳ ಹಾಗೂ ಕಬ್ಬಿಣದ ತುಂಡುಗಳನ್ನು ಹೊಂದಿಸಿರುತ್ತಿದ್ದರು. ಶಿಕ್ಷೆಗೊಳಗಾದವನಿಗೆ ಅದರಿಂದ ಹೊಡೆಯು ವಾಗ ಅವನ ಮಾಂಸಖಂಡಗಳು ತೆರೆದು ಕೊಂಡು, ಮೂಳೆ ಗಳು ಕಾಣಿಸಿಕೊಳ್ಳುತ್ತದ್ದವು. ಈ ರೀತಿ ಮಾಡುವದರಿಂದ ಅನೇಕರು ವಿಕಲಾಂಗರಾಗಿ, ಕೆಲವರು ಸಾಯುತ್ತಿದ್ದರು, ಕೆಲವರು ಬದುಕುಳಿಯುತ್ತಿದ್ದರು. ಪೌಲನು ಅನೇಕ ಸಾರಿ ಚಡಿಗಳ ಏಟನ್ನು ಹೊಂದಿದ್ದರೂ (2 ಕೊರಿಂಥ 11:24, 25), ಆದರೆ ಇದುವರೆಗೂ ರೋಮಾಯರಿಂದ ಶಿಕ್ಷೆಯನ್ನು ಅನುಭವಿಸಿರಲಿಲ್ಲ.

ಸಹಸ್ರಾಧಿಪತಿಯು ಶಿಕ್ಷೆಗೆ ಒಳಪಟ್ಟವನ ಸಂಗಡ, ಶಿಕ್ಷೆ ವಿಧಿಸುವ ಕೊಠಡಿಗೆ ಹೋಗಿರಲಿಲ್ಲ; ಪ್ರಾಯಶಃ ಆ ಕಠಿಣ ಶಿಕ್ಷೆಯನ್ನು ವೀಕ್ಷಿಸಲು ಅವನಿಗೆ ಮನಸ್ಸಿರಲಿಲ್ಲ; ಒಂದು ವೇಳೆ ಪಿಲಾತನ ಆ

ದೇಶದ ಮೇರೆಗೆ ಯೇಸುವಿಗೂ ಸಹ ಇದೇ ಕೊರಡಿಯಲ್ಲಿ ಶಿಕ್ಷೆ ವಿಧಿಸಿರಬಹುದು (ಯೋಹಾನ 19:1; ಮತ್ತಾಯ 27:26; ಮಾರ್ಕ 15:15). ಪೌಲನ ವಸ್ತ್ರಗಳನ್ನು ಕಳಚಿ; ಕಂಬಕ್ಕೆ ಅವನನ್ನು ಬಿಗಿದಿದ್ದರು.[38] ಶಿಕ್ಷೆ ನೀಡುವವನು ಅವನನ್ನು ಹೊಡೆಯುವದಕ್ಕೆ ಸಿದ್ಧನಾಗುವಾಗ ಸಹಸ್ರಾಧಿಪತಿಯ[39] ಸಂಗಡ ಪೌಲನು ಮಾತನಾಡಿದನು: "ಅವರು ಪೌಲನನ್ನು ಬಗ್ಗಿಸಿ ಬಾರುಗಳಿಂದ ಕಟ್ಟುವಾಗ ತನ್ನ ಹತ್ತಿರ ನಿಂತಿದ್ದ ಶತಾಧಿಪತಿಯನ್ನು - ರೋಮಾಪುರದ ಹಕ್ಕುದಾರನಾದ ಮನುಷ್ಯನನ್ನು ನ್ಯಾಯವಿಚಾರಣೆ ಮಾಡದೆ ಕೊರಡೆಗಳಿಂದ ಹೊಡೆಸುವದು ನಿಮಗೆ ನ್ಯಾಯವೋ? ಎಂದು ಕೇಳಿದನು" (ವಚನ 25).[40]

ಪೌಲನ ಈ ಪ್ರಶ್ನೆಯು ಶಿಕ್ಷೆ ನೀಡುವವನಿಗೇ, ಶಿಕ್ಷೆ ನೀಡಿದ ಹಾಗಾಯಿತು. ರೋಮಾಯದ ಹಕ್ಕುದಾರರಿಗೆ ಚಡಿಗಳಿಂದ ಹೊಡೆಯುವದು ಅವರ ನಿಯಮಗಳಿಗೆ ವಿರುದ್ಧವಾಗಿತ್ತು,[41] ಅದನ್ನು ರೋಮಾಯರು, ಪೌಲನು ಸಹ ಅರಿತಿದ್ದನು. ಪೌಲನು ರೋಮಾಯದ ಹಕ್ಕುದಾರನಾಗಿದ್ದರಿಂದ, ಅವನಿಗೆ ಚಡಿಗಳಿಂದ ನೀಡಿದ ಶಿಕ್ಷೆಯ ನಿಮಿತ್ತ ತಾವುಗಳೇ ತಮ್ಮ ಕೆಲಸಗಳನ್ನು ಕಳಕೊಳ್ಳುವ ಸಾಧ್ಯತೆ ಇತ್ತು. ಶತಾಧಿಪತಿಯು ಆ ಮಾತನ್ನು ಕೇಳಿ, ಸಹಸಾಧಿಪತಿಯ ಸಂಡ ಇತ್ತು. ಶತಾಧಿಪತಿಯ ಆ ಮಾತನ್ನು ಕೇಳಿ, ಸಹಸಾಧಿಪತಿಯ ಸಂಗಡ ಮಾತಾಡಿ: "ನೀನು ಏನುಮಾಡಬೇಕೆಂದಿದ್ದಿ? ಈ ಮನುಷ್ಯನು ರೋಮಾಪುರದ ಹಕ್ಕುದಾರನು ಅಂದನು" (ವಚನ 26).

ಸಹಸ್ರಾಧಿಪತಿಯು ಪೌಲನ ಹತ್ತಿರಕ್ಕೆ ಬಂದು - ನೀನು ರೋಮಾಪುರದವರ ಹಕ್ಕುಳ್ಳವನೇನೋ? ನನಗೆ ಹೇಳು ಎಂದು ಅವನನ್ನು ಕೇಳಿದನು. ಅವನು, ಹೌದು ಎಂದನು (ವಚನ 27) ಪೌಲನ ಈ ಉತ್ತರವನ್ನು ಅರ್ಥಮಾಡಿಕೊಳ್ಳುವದು ಕಷ್ಟಕರ ವಾಗಿದೆ. ತಲೆ ಕೂದಲಿಲ್ಲದ,[42] ಈ ಪೌಲನು ದೈಹಿಕವಾಗಿ ನಿರ್ಬಲನಾಗಿ ಕಾಣುತ್ತಿದ್ದನು (2 ಕೊರಿಂಥ 10:10). ಈಗ ಅವನು ವಸ್ತ್ರವಿಲ್ಲದವನಾಗಿ ನಿಂತಿರುವಾಗ, ಅವನ ದೇಹದ ಮೇಲೆ ಹಳೆಯ ಗಾಯದ ಗುರುತುಗಳಿದ್ದವು (ಗಲಾತ್ಯ 6:17) ಮತ್ತು ಹೊಸದಾದ ಗಾಯಗಳು ಸಹ ಇದ್ದರೂ, ಅವನು ಮೂರು ಸಾರಿ ಸೋತವನಂತೆ[43] ಇದ್ದನೇ ವಿನಃ ರೋಮಾಯದ ಹಕ್ಕುದಾರನಂತೆ ಕಾಣಲಿಲ್ಲ. ಆ ಅಧಿಕಾರಿಯ ಸ್ವರದಲ್ಲಿ ಸಂದೇಹಗಳನ್ನು[44] ನಾನು ನೋಡುವಾಗ, "ಬಹಳಷ್ಟು ಹಣವನ್ನು ವ್ಯಯ ಮಾಡಿ ರೋಮಾಯರ ಹಕ್ಕನ್ನು ಹೊಂದಿದ್ದೇನೆ ಎಂಬ ಪ್ರತಿಕ್ರಿಯೆ ಉಂಟಾಗಿರಬಹುದು"[45] (ವಚನ 28ಎ). ಆದರೆ ಪ್ರಾಯಶಃ ಅಧಿಕಾರಿಯು "ಒಬ್ಬ ಯೆಹೂದ್ಯ ದಾರಿಹೋಕನು ಇಷ್ಟೊಂದು ಹಣವನ್ನು ಹೇಗೆ ಸಂಪಾದಿಸಿರಬಹುದು?" ಆದರೆ, "ಪೌಲನು ನಾನಾದರೋ ಹಕ್ಕುದಾರನಾಗಿ ಹುಟ್ಟಿದವನೆಂದು" ಉತ್ತರಿಸಿದನು (ವಚನ 28ಬಿ).[46]

ಪೌಲನು ತಾರ್ಸದಲ್ಲಿ ಹುಟ್ಟಿದವನಾದ್ದರಿಂದ ರೋಮಾಯರ ಹಕ್ಕನ್ನು ಹೊಂದಲಿಲ್ಲ; ತಾರ್ಸವು ಸ್ವತಂತ್ರ ಪಟ್ಟಣವಾಗಿತ್ತೇ ವಿನಃ ರೋಮಾಯರ ಸಂಸ್ಥಾನವಾಗಿರಲಿಲ್ಲ. ಆದುದರಿಂದ, ಅವನ ತಂದೆ ಅಥವಾ ಅಜ್ಜನು ಹಕ್ಕುಳವರಾಗಿರಬಹುದು. ಆ ಹಕ್ಕನ್ನು ಅವನು ಹೇಗೆ ಪಡೆದಿರಬಹುದೆಂದು ನಾವು ಅರಿಯೆವು. ಪೌಲನ ಮೂಲಪಿತೃಗಳು ರೋಮಾಯದ ಅಧಿಕಾರದಲ್ಲಿದ್ದ[47] - ಪಾಂಪೆ ಅಥವಾ ಮಾರ್ಕ ಆಂಥೋನಿ ಹೀಗೆ ಸೇವೆ ಯನ್ನು ಸಲ್ಲಿಸಿರಬಹುದು, ಅವರಿಬ್ಬರೂ ತಾರ್ಸಕ್ಕೆ ಸಂಬಂಧಪಟ್ಟವರಾಗಿರಬಹುದು.

ಪೌಲನ ಸ್ವರವನ್ನು ಕೇಳಿದವರು ಆಸ್ವರದಲ್ಲಿ ಯಾವುದೇ ಸಂದೇಹವಿಲ್ಲದ್ದನ್ನು ಅವರು ಗ್ರಹಿಸಿಕೊಂಡರು: ಅವನ ಹೇಳಿಕೆಯಂತೆಯೇ ಅವನಿದ್ದನು![48] "ಅವನನ್ನು ಹೊಡೆದು ವಿಚಾರಿಸುವದಕ್ಕೆ ಬಂದವರು ಕೂಡಲೇ ಅವನನ್ನುಬಿಟ್ಟರು" (ವಚನ 29ಎ). ಅವನನ್ನು ಬಿಡುಗಡೆ ಮಾಡುವದಕ್ಕೆ ಕೂಗಿ ಹೇಳುತ್ತಿರಬಹುದು, ಆ ಚಡಿಗಳನ್ನು ಬೇಗನೆ ಕೆಳಗಿಸಿರಬಹುದು. ಮ್ಯಾಕ್ ಗಾರ್ವೆಯವರ ಪ್ರಕಾರ: " 'ನಾನು ಸಹ ರೋಮಾಯದ ಹಕ್ಕುದಾರನು'[49] ಎಂದು ಹೇಳಿದ ಚಿಕ್ಕ ಹೇಳಿಕೆಯು, ಒಂದು ಸಾಧಾರಣವಾದ ಚಿಕ್ಕ ಪ್ರಾಂತ್ಯದ, ಚಿಕ್ಕ ಸೆರೆಮನೆಯ ಆವರಣದಲ್ಲಿ, ದೇಶದ ಒಂದು ನಿಯಮವು ಅವರಿಗೆ ಎದುರಾಗಿದ್ದ ಚಡಿಯ ಶಿಕ್ಷೆಯನ್ನು ತಡೆ

ಹಿಡಿದ ಭಲವನ್ನು ನೋಡುತ್ತೇವೆ.''

''ಅದಲ್ಲದೆ ಅವನನ್ನು ರೋಮಾಪುರದ ಹಕ್ಕುದಾರನೆಂದು ಸಹಾಸ್ರಧಿಪತಿಗೆ ತಿಳಿದುಬಂದಾಗ ತಾನು ಅವನನ್ನು ಕಟ್ಟಿಸಿದ್ದರಿಂದ ಅವನಿಗೂ ಭಯಹಿಡಿಯಿತು''[50] (ವಚನ 29ಬಿ). ಅವನನ್ನು ಹೊಡೆದಿದ್ದರೆ ಆತನ ಹಕ್ಕುದಾರವನ್ನು ಕಳೆದುಕೊಂಡಿರಬಹುದು - ಅವನ ಪ್ರಾಣವನ್ನು ಸಹ ಕಳಕೊಂಡಿರಬಹುದು. ಅಂಥಹ ದುರಂತ ಆಗದಂತೆ ನೆಮ್ಮದಿಗೊಂಡನು - ಆದರೆ ಮತ್ತಷ್ಟು ಅವರು ಗಾಬರಿಗೊಳಗಾದರು. ಈ ನಿರಾಪಾಯಕಾರಿಯಾದ ಯೆಹೂದ್ಯನನ್ನು /ರೋಮಾಯದವರು ಏಕೆ ಅಷ್ಟೊಂದಾಗಿ ದ್ವೇಷಿಸಿದರು?

''ಈ ಸತ್ಯವನ್ನು ಅರಿಯುವ ಕುರಿತು.''[51] ಆ ಶತಾಧಿಪತಿಯು ಮಾಡಿದ ಪ್ರಯತ್ನವನ್ನು ಮುಂದಿನ ಪಾಠದಲ್ಲಿ ನೋಡುತ್ತೇವೆ. ಈ ಕ್ಷಣ, ಈ ಪಾಠದಿಂದ ಏನನ್ನು ಕಲಿತೆವು ಎಂಬುದನ್ನು ನೋಡೋಣ.

## ನಮ್ಮ ಪ್ರತಿವಾದ

ಈ ದಿನಗಳಲ್ಲಿ ನಾವು ಬಳಸುವ ಕ್ಷಮಾಪಣೆ ಮತ್ತು ''ಪ್ರತಿವಾದ'' ಎಂಬ ಪದಗಳ ನಡುವೆ ಯಾವುದೇ ಸಂಬಂಧವಿರುವದಿಲ್ಲ. ಕ್ರೈಸ್ತರಾದ ಅನೇಕರು ಅವನ ನಂಬಿಕೆಯ ಕುರಿತು ನಾಚಿಕೆ ಪಡುವವರಾಗಿರುತ್ತಾರೆ - ಅವರು ಪರಿವರ್ತನೆಗೊಂಡದ್ದಕ್ಕಾಗಿ ಕ್ಷಮಾಪಣೆ ಪಡಬೇಕೆಂದು ಇಚ್ಚಿಸುತ್ತಾರೆ. ಸತ್ಯವೇದದಲ್ಲಿರುವ ಪ್ರತಿವಾದವು ತಪ್ಪುಗಳ ಒಪ್ಪಿಕೆಯಾಗಿರುವದಿಲ್ಲ, ಅದು ಸತ್ಯದರ್ತವಾಗಿರುತ್ತದೆ. ''ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರೆಲ್ಲರಿಗೆ ಉತ್ತರ ಹೇಳುವದಕ್ಕೆ'' ಕೆಲವು ಪಾಠಗಳನ್ನು ನಾನು ತಿಳಿಸುವೆನು (1 ಪೇತ್ರ 3:15ಬಿ):

1. *ಸಿದ್ಧವಾಗಿರ್ರಿ.* ಪೌಲನ ಹಾಗೆ, ನಂಬಿಕೆಗೆ ಉತ್ತರ ಹೇಳವದಕ್ಕೆ ನೀವು ಬೇಗನೆ ಆಹ್ವಾನ ಪಡೆಯಲಿರಬಹುದು, ಆದ್ದರಿಂದ ಸಿದ್ಧವಾಗಿರ್ರಿ.

2. *ವಿನಯ ಶೀಲರಾಗಿರ್ರಿ.* ಪೌಲನು ಹಿಡಿಯಲ್ಪಡುವ ಮುನ್ನ, ''ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೆತನದಿಂದ ಕೆಟ್ಟತನವನ್ನು ಸೋಲಿಸಿರಿ'' ಎಂದು ಪೌಲನು ಬರೆದಿದ್ದನು (ರೋಮಾಪುರ 12:17-21). ಅವನು ಬರೆದ ಹಾಗೆ, ಜೀವಿಸಲು ಸಾಧ್ಯವಿತ್ತೆ? ಮೂರ್ಖರಾದ ಯೆಹೂದ್ಯರು ಚೂರು ಚೂರು ಮಾಡಲು ಸಿದ್ಧವಾಗಿದ್ದರು, ಅವನು ಅನೇಕ ವಿಧವಾದ ಪರೀಕ್ಷೆಗೆ ಒಳಗಾದನು! ಅವನು ಅದನ್ನು ಎದುರಿಸಿದನು, ಹಾಗೂ ಶಾಂತನಾಗಿ ಹಾಗೂ ವಿನಯ ಶೀಲನಾಗಿ ವರ್ತಿಸಿದನು. ನಿಮ್ಮ ನಂಬಿಕೆಗೆ ವಿರುದ್ಧವಾದವರು ಉಗ್ರರಾಗಿರಬಹುದು, ಆದರೆ ನೀವುಗಳು ಆ ವಿಧವಾಗಿ ಇರುವ ಅಗತ್ಯವಿಲ್ಲ.

3. *ಸ್ಪಂತಿಕೆಯಿರಲಿ.* ಸತ್ಯವೇದದಲ್ಲಿ ತಿಳಿಯಬೇಕಾದ ಸಕಲ ಅಂಶಗಳನ್ನು ನೀವು ತಿಳಿಯದೇ ಇರಬಹುದು ಅಥವಾ ಕೇಳಲಾದ ಪ್ರತಿ ಪ್ರಶ್ನೆಗೆ ಉತ್ತರ ಹೇಳಲಾಗದೆ ಇರಬಹುದು, ಆದರೆ ನೀವುಗಳು ಕ್ರೈಸ್ತರಾದ ಬಗ್ಗೆ ತಿಳಿಸಬಹುದು. ''ಯೇಸು ನಿಮಗಾಗಿ ಮಾಡಿರುವ ವಿಷಯಗಳಿಗೆ ನೀವುಗಳು ಮಹತ್ವದ ಅಧಿಕಾರವನ್ನು ಹೊಂದಿರುವಿರಿ!''[52] ಪೌಲನು ತಾನು ಪರಿವರ್ತನೆಗೊಂಡ ವಿಷಯಕ್ಕಾಗಿ ಸಾಕ್ಷಿ ನೀಡಿದನು. ಸತ್ಯವೇದವನ್ನು ಚೆನ್ನಾಗಿ ಅರಿತು, ಆದರಿಂದ ಉತ್ತರ ಅಥವಾ ಪ್ರತಿವಾದ ಮಾಡಲು ನೀವು ವೃದ್ಧಿ ಹೊಂದುವ ಸಾಧ್ಯತೆಯಿದೆ. ನಿಮ್ಮ ಸಂದೇಶದಲ್ಲಿ ಸ್ಪಂತಿಕೆಯಿರಲಿ.

4. *ಕ್ರಿಸ್ತನಲ್ಲಿ - ಕೇಂದ್ರಿಕೃತವಾಗಿರಲಿ.* ಪೌಲನು ತನ್ನ ಪರಿವರ್ತನೆಯ ಕುರಿತು ತಿಳಿಸಿದರೂ,ಅದು ಅವನ ಮೇಲಿನ ಆಕರ್ಷಣೆಯಾಗಿರಲಿಲ್ಲ, ''ನಜರೇತಿನ ಯೇಸು'' ಎಂಬ ಅವನ ಹೇಳಿಕೆಯಲ್ಲಿ, ಆತನು ಮಾತ್ರ ಜನರಿಗಾಗಿ ಕ್ರೂಜಿತನಾದವನು, ಮತ್ತು ಪೌಲನು ತನಗೆ ದೊರೆತ ದರ್ಶನದ ಮೂಲಕ, ಅದೇ ಯೇಸು ಮರಣದಿಂದ ಎದ್ದು ಬಂದವನು ಎಂಬುದನ್ನು ರುಜುವಾತು ಪಡಿಸಿದನು. ನಮ್ಮನ್ನು ಹೊರತುಪಡಿಸಿ, ಯೇಸುವಿಗಾಗಿ ಜನರನ್ನು ಪರಿವರ್ತನೆಪಡಿಸಬೇಕು.

5. *ಮೆದು ಸ್ವಭಾವವಿರಬೇಕು.* ಪೌಲನ ಮೂಲ ಸಂದೇಶ ಒಂದೇ ಆಗಿದ್ದರೂ, ಈ ಸನ್ನಿವೇಶಕ್ಕೆ ತಕ್ಕ ಹಾಗೆ ಅವನು ಮಾತನಾಡಿದನು. ನಿಮಗೆ ಸವಾಲು ಮಾಡುವವರ ಅನುಗುಣವಾಗಿ ಮಾತನಾಡಿರಿ.

6. *ಸವಾಲು ನೀಡುವವರಾಗಿರ್ರಿ.* ಯೇಸು ಮಾಡಿದ ಸಂಗತಿಯನ್ನು ತಿಳಿಸಿದ ನಂತರ, ಮನುಷ್ಯನು ಮಾಡಬೇಕಾದ ಸಂಗತಿಯನ್ನು ಪೌಲನು ತಿಳಿಸಿದನು. ಯೇಸು ಮೆಸ್ಸೀಯ ನಾಗಿರುವದರಿಂದ, ಆತನು ಕೈಗೊಂಡ ಕಾರ್ಯಗಳನ್ನು ನಾವೂ ಸಹ ನಡಿಸಬೇಕು: "ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು" (ವಚನ 16ಬಿ). ನಂತರ ಪ್ರತಿಯೊಬ್ಬನು ತನ್ನ ಜೀವಿತವನ್ನು ಕರ್ತನಿಗೆ ಸಮರ್ಪಿಸಬೇಕು. ನಿನ್ನ ನಂಬಿಕೆಗಾಗಿ ನೀನು ತರ್ಕಮಾಡುವಾಗ, ತರ್ಕವನ್ನು ಹೊರತುಪಡಿಸಿ, ಆತ್ಮವನ್ನು ಗೆದ್ದುಕೊಳ್ಳುವ ಉದ್ದೇಶ ಮಾತ್ರವಿರಬೇಕು. ನೀನು ಮಾಡಿದಂತೆಯೇ, ಇತರರು ಸಮರ್ಪಿಸಿಕೊಳ್ಳುವಂತೆ ಸವಾಲನ್ನು ನೀಡಬೇಕು.

7. *ಸಮಂಜಸವಾಗಿರಲಿ.* ನಿನ್ನ ಜೀವಿತಕ್ಕೂ ಮತ್ತು ನೀನು ಹೇಳುವ ಮಾತಿಗೂ ಹೊಂದಾಣಿಕೆಯಿದ್ದರೆ ಮಾತ್ರ ನಿನ್ನ ತರ್ಕವು ಬೆಲೆವುಳ್ಳದ್ದಾಗಿರುತ್ತದೆ. ಪೌಲನು ತನ್ನ ನಂಬಿಕೆಗಾಗಿ ಸಾಯಲು ಸಿದ್ಧನಾಗಿದ್ದರೆ, ನೀನು ನಿನಗಾಗಿ ಜೀವಿಸುವದನ್ನು ಜನರು ಕಾಣಬೇಕೇ?

8. *ವಿವೇಕವುಳ್ಳವನಾಗಿರು.* ನಾವು ನಮ್ಮ ನಂಬಿಕೆಗಾಗಿ ಸಾಯಲು ಸಿದ್ಧರಿದ್ದರೂ, ಸಾಮಾನ್ಯ ಜ್ಞಾನವುಳ್ಳವರಾಗಿರಬೇಕು. ಕ್ರಿಸ್ತನ ಹೊರತಾದ ಬಾಧೆಗಳನ್ನು, ಪೌಲನು ಅನುಭವಿಸಲು ಸಿದ್ಧನಿರಲಿಲ್ಲ. ರೋಮಾ ಹಕ್ಕುದಾರನು ಎಂದು ಹೇಳಲು ಪೌಲನು ಹಿಂಜರಿಯಲಿಲ್ಲ. ಅನ್ಯರಿಂದ ದೂಷಣೆಯನ್ನು ನೀವು ಹೊಂದುವ ಅಗತ್ಯವಿಲ್ಲ. ವಿವೇಕ ವುಳ್ಳವರಾಗಿ ದಾಟಿಹೋಗಿರಿ.

9. *ಛಲವುಳ್ಳವರಾಗಿರಿ.* ನೀವು ಉತ್ತಮವಾದದ್ದನ್ನು ನಡೆಸಿದ ನಂತರ, ನಿಮಗೆ ಸವಾಲು ನೀಡಿದವರನ್ನು ಮನ ಪರಿವರ್ತನೆಗೊಳಸದಿದ್ದರೆ, ನಿರಾಶರಾಗಬೇಡಿರಿ. ಪೌಲನು ದೊಂಬಿ ಜನರಿಗೆ ಮನವರಿಕೆ ಪಡಿಸಲು ಸಾಧ್ಯವಾಗಲಿಲ್ಲ. ಮುಂದಿನ ನಾಲ್ಕು ಅಧ್ಯಾಯಗಳಲ್ಲಿ, ಪೌಲನ ಇತರೆ ಮೂರು ಪ್ರಸಂಗಗಳು ದಾಖಲಾಗಿವೆ, ಹಾಗೂ ಒಂದು ವೈಯಕ್ತಿಕ ಅಧ್ಯಯನ ಒಳಗೊಂಡಿದೆ. ದಾಖಲೆಗಳ ಪ್ರಕಾರ ಒಬ್ಬನಾದರೂ ಪರಿವರ್ತನೆಗೊಳ್ಳಲಿಲ್ಲ, ಆದಾಗ್ಯೂ ಅಪೊಸ್ತಲನು ದೇವರು ಬಯಸಿದ್ದನ್ನೇ ಮಾಡಿದನು. ನಿಮ್ಮ ನಂಬಿಕೆಯನ್ನು ಹಂಚಿಕೊಳ್ಳುವದರಲ್ಲಿ ನೀವು ಮುಂದುವರಿಯುವಾಗ, ನೀವು ದೇವರ ಇಚ್ಛೆಯನ್ನೆ ಈಡೇರಿ ಸುವವರಾಗಿರುವಿರಿ. "ಪ್ರತಿಫಲ" ಕಾಣದಿದ್ದರೂ, ಸುಲಭವಾಗಿ ಬಿಟ್ಟುಕೊಡಬೇಡಿರಿ.

## ಮುಕ್ತಾಯ

ಈ ಪಾಠವನ್ನು ಅಂತ್ಯಗೊಳಿಸುವಾಗ, ಪೌಲನ ಪರಿವರ್ತನೆಯ ಕುರಿತು ಪುನಃ ಆಲೋ ಚಿಸೋಣ. ಪರಿವರ್ತನೆ ಹಾಗೂ ಸಮರ್ಪಣೆಯ[53] ಕುರಿತು ಪೌಲನು ತನ್ನ ಪ್ರಸಂಗದಲ್ಲಿ ತಿಳಿಸಿರುವನು. ಹೇಗಿದ್ದರೂ ದೇವರ ಸಮ್ಮುಖದಲ್ಲಿ ಭರವಸೆಯಿಲ್ಲದ ಸನ್ನಿವೇಶಗಳು ಇರುವದಿಲ್ಲ! ಆತನು ಪೌಲನ ಜೀವಿತವನ್ನು ಮಾರ್ಪಡಿಸುವದಾದರೆ, ನಮ್ಮ ಜೀವಿತಗಳನ್ನು ಮಾರ್ಪಡಿಸಲು ಸಾಧ್ಯವಿದೆ! ನೀವು ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದುವದಾ ದರೆ, ಆತನ ರಕ್ತವು ನಿಮ್ಮ ಪಾಪಗಳನ್ನು ತೊಳೆದು ಹಾಕು ತ್ತದೆ (ವಚನ 16)? ಪೌಲನಂತೆ, ನಿಮ್ಮ ಜೀವಿತವನ್ನು ಕರ್ತನಿಗೆ ಮೀಸಲಾಗಿಟ್ಟಿದ್ದೀರಾ? ಪೌಲನ ಕೇಳುಗರು, ಅವನ ಸಂದೇಶದ ಮೂಲಕ ಮೃದುವಾಗಲಿಲ್ಲ, ಆದರೆ ನಿಮ್ಮ ಜೀವಿತಗಳು ಬದಲಾಗುತ್ತವೆ ಎಂದು ನಂಬುತ್ತೇವೆ, ವಿಧೇಯನಾಗುವ ಸಮಯವು ಇದೇ ಆಗಿರುತ್ತದೆ.

## ಪ್ರಸಂಗದ ಟಿಪ್ಪಣಿ

ಪೌಲನು ಅಂತೋನಿಯ ಕೋಟೆಯ ಮೆಟ್ಟಿಲುಗಳ ಮೇಲೆನಿಂತು ತಿಳಿಸಿದ ಪ್ರಸಂಗವನ್ನು ಮೂರು ವಿಭಾಗಗಳನ್ನಾಗಿ ಮಾಡಬಹುದು: (1) ಅವನ ಜೀವಿತದ ಆರಂಭದ ವರ್ತನೆ (ವಚನಗಳು 3-5); (2) ಅವನ ಆಶ್ಚರ್ಯಕರವಾದ ಪರಿವರ್ತನೆ (ವಚನಗಳು 6-13, 16); (3) ಆಶ್ಚರ್ಯಕರವಾದ ಸಮರ್ಪಣೆ (ವಚನಗಳು 14, 15, 17-21). (ಇತರೆ ಮೂಲಗಳಿಂದ ಇದನ್ನು ನಾನು ಸಂಗ್ರಹಿಸಿರುವೆನು.)

---

ಟಿಪ್ಪಣಿಗಳು

[1]ಅಪೊಲಾಜಿಯಾ ಅಂದರೆ "ಅಪೋ" (ಇಂದ) "ಲೋಗೊಸ್" ಎಂಬ (ವ್ಯಾಕರಣ) ಜೋಡಿ ಪದ. [2]ಕ್ರೈಸ್ತ ನಂಬಿಕೆಯ ಪ್ರತಿವಾದವೇ "ಅಪಾಲಜೆಟಿಕ್ಸ್." [3]22:1; 24:10; 25:8, 16; 26:1, 2, 24ರಲ್ಲಿನ ಪದ, 19:33ರರಲ್ಲಿ ಎಂಟನೇಯ ಸಾರಿ ಹೇಳಲಾಗಿದೆ, ಎಫೆಸದ ನಾಟಕ ಶಾಲೆಯಲ್ಲಿ ಅಲೆಕ್ಸಾಂಡ್ರನು ಮಾಡಿದ ಪ್ರತಿವಾದ. [4]ಪೌಲನು ಯಾವುದೇ ನಿಯಮವನ್ನು ಮೀರಲಿಲ್ಲವೆಂದು ಲೂಕನು ಅಪೊಸ್ತರ ಕೃತ್ಯಗಳು ಪುಸ್ತಕದ ಕಾಲು ಭಾಗದಷ್ಟು ಒಕ್ಕಣೆಯಲ್ಲಿ ಪುನಃ ಪುನಃ ತಿಳಿಸಿರುವನು. ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಚರ್ಚಿಸಿದ "ಪ್ರತಿಪಾದನಾತ್ಮಕ ಉದ್ದೇಶವನ್ನು" "ಹಿಂದೆಂದೂ ಬರೆಯಲ್ಪಡದ ಮಹಾಪ್ರಸಂಗ" ಎಂಬ ಪಾಠದಲ್ಲಿ *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ಓದಬಹುದು. [5]ಕ್ರಿ.ಪೂ. 35ರಲ್ಲಿ ಅರಸನಾದ ಹೆರೋದನು ಅಂತೋನಿಯ ಕೋಟೆಯನ್ನು ಕಟ್ಟಿಸಿದನು. [6]ಪ್ರಥಮ ಅವಕಾಶದಲ್ಲಿ ಅಪೊಸ್ತಲರಲ್ಲಿ ಒಬ್ಬನು ಯೆರೂಸಲೇಮಿಗೆ ಬಂದು ಸುವಾರ್ತೆಯನ್ನು ಸಾರಿದನು (20:24ಬಿ). [7]ಸಹಾಸ್ರಾದಿಪತಿಯು ಪೌಲನ ಒಂದು ಕೈಯನ್ನು ಸ್ವತಂತ್ರಗೊಳಿಸಿದನು (21:33). [8]ಇಬ್ರೀಯ ಹೇಳಿಕೆಯು ಅರಮಾ ಭಾಷೆಯಾಗಿತ್ತು. [9]ಪೌಲನ ಪ್ರಥಮ ಪದಗಳನ್ನು, ಸ್ತೆಫನನ 7:2ಕ್ಕೆ ಹೋಲಿಸಿ. ಅವನು ಹಿರಿ ಸಭೆಯನ್ನುದ್ದೇಶಿಸಿ "ತಂದೆಗಳೇ, ಸಹೋದರರೇ" ಅಂದನು. ಅದ್ಯಾಯ 21ರಲ್ಲಿ, ಈ ಸಮೂಹದ ಕೆಲವರು ಇರಬಹುದು ಹಿರಿಯರ ಗೌರವಾರ್ತ ತಂದೆಗಳೇ ಎಂದು ಪೌಲನು ಹೇಳಿರಬಹುದು. [10]ಪೌಲನ ಗ್ರೀಕ್ ಭಾಷೆಯನ್ನು ಹಲವರು ಆಲಿಸಿದರು, ಹೇಗೂ ಅವರಲ್ಲಿ ಸಂಬಂಧಕ್ಕಾಗಿ ಮತನಾಡಿದರು.

[11]ಇದನ್ನು ಕ್ರೈಸ್ತರಿಗೆ ಹೇಳದೆ, ಸಹ ಯೆಹೂದ್ಯರಿಗೆ ಹೇಳಿರಬಹುದು. [12]ರೋಮಾಯದ ಸಭಾಮಂದಿರಗಳಲ್ಲಿ ಪೌಲನು ವಾಕ್ಯದಿಂದ ನಾನು ಪ್ರಸಂಗಿಸುವದು ಕ್ರಿಸ್ತನೇ ಎಂದು ತರ್ಕಿಸಿದನು (17:2, 3). ಯೆರೂಸಲೇಮಿನ ವಿಭಿನ್ನ ಸನ್ನಿವೇಶದಲ್ಲಿ ಇದನ್ನು ಹೇಳಿದನು. ಅವರೆಲ್ಲರೂ, ಅವನ ರಕ್ತಕ್ಕಾಗಿ ಕಾಯುತ್ತಿದ್ದರಿಂದ, ಅವನ ಮೇಲೆ ಭರವಸವಿಟ್ಟು, ಅವರು ಕ್ರಿಸ್ತನ ಸಂದೇಶ ಕೇಳುವಂತೆ ಮಾಡಬೇಕಿತ್ತು. [13]ಅಪೊಸ್ತಲರ ಕೃತ್ಯಗಳು 22ರಲ್ಲಿ ಪೌಲನ ಎರಡು ಸಂದೇಶಗಳಿವೆ. *ಅಪೊಸ್ತಲರ ಕೃತ್ಯಗಳು, 2ನೇ* "ಶಿಷ್ಯತ್ವದ" ಪಾಠ. [14]ಗ್ರೀಕ್‌ನಲ್ಲಿ "ಪಾದದ ಬಳಿ" ಎಂದಿದೆ, ಹಿಂದಿನ ಕಾಲದಲ್ಲಿ ಶಿಷ್ಯರು ಪಾದದ ಬಳಿ ಕುಳಿತುಕೊಳ್ಳುತ್ತಿದ್ದರು. [15]ಗಮಲಿಯೇಲನ ಕುರಿತು ಈ ಹಿಂದೆ ನೋಡಿದೆವು (5:34). *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ "ಮಾನವನು "ಇಲ್ಲವೆಂದು" ಹೇಳಿದಾಗ ದೇವರು "ಇದೆ" ಎನ್ನುತ್ತಾನೆ" ಎಂಬ ಪಾಠವನ್ನು ನೋಡಿರಿ. [16]ಅಥೇನಿಯರು ಹೇಳಿದ ರೀತಿಯಲ್ಲಿ ಗೌರವ ಸಲ್ಲಿಸಿದನು (17:22) ಇತರ ಸತ್ಯಗಳು ರಹಸ್ಯವಾಗಿವೆ (ರೋಮಾಪುರ 10:2). [17]ಹಿರಿಯರು ಅಥವಾ ಹಿರಿಯ ಯೆಹೂದ್ಯರಿದ್ದ ಸಂಘಕ್ಕೆ "ಹಿರಿಸಭೆ" ಎಂದು ಕರೆದರು, *ಅಪೊಸ್ತಲರ ಕೃತ್ಯಗಳು, 1ನೇ* ನೋಡಿರಿ. [18]ಪೌಲನು ಕ್ರೈಸ್ತರನ್ನು ಹಿಂಸಿಸುವ ಕಾಲದಲ್ಲಿ ಕಾಯಫನು ಮಹಾಯಾಜಕನಾಗಿದ್ದನು (ಅಪೊಸ್ತಲರ ಕೃತ್ಯಗಳು 4:6ರ ಮೇಲಿರುವ ಸೂಚನೆಗಳನ್ನು *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ "ಸೈತಾನನು ನಿಮಗೆ ಕಠಿಣವಾದ ಸಮಯವನ್ನು ಎದುರುಮಾಡಿದಾಗ" ಎಂಬ ಪಾಠವನ್ನು ನೋಡಿ). ಪೌಲನ ಕೋಟೆಯ ಮೆಟ್ಟಿಲುಗಳ ಮೇಲೆ ನಿಂತು ಮಾತನಾಡುವಾಗ ಅನನೀಯನು ಮಹಾಯಾಜಕನಾಗಿದ್ದನು (23:2). ಕಾಯಫನು ಇನ್ನೂ ಜೀವದಿಂದಿರಬಹುದು, ಪೌಲನನ್ನು ದಮಸ್ಕಕ್ಕೆ ಈ ಮಂಡಳಿಯವರೇ ಕಳುಹಿಸಿರಬಹುದು. ಅದಕ್ಕೆ ಭಿನ್ನವಾಗಿ, ತಾನು ಹೇಳುವದನ್ನು ಮಹಾಸಭೆಯಲ್ಲಿರುವ ದಾಖಲೆಗಳು ದೃಢಪಡಿಸುತ್ತವೆಂದು ಪೌಲನು ಸೂಚಿಸಿರಬಹುದು. [19]ಈ "ಸಹೋದರರು" ಸಹ ಯೆಹೂದ್ಯರು, ಕ್ರೈಸ್ತ ಸಹೋದರರಲ್ಲ. [20]ಅಪೊಸ್ತಲರ ಕೃತ್ಯಗಳಲ್ಲಿ ಇದು ಪೌಲನ ಪರಿವರ್ತನೆಯ ಎರಡನೆಯ ದಾಖಲೆ. ಅಧ್ಯಾಯ 9ರಲ್ಲಿ ಮೊದಲನೇ ಹಾಗೂ 26ನೇ

ಅಧ್ಯಾಯದಲ್ಲಿ ಮೂರನೆಯ ದಾಖಲೆ. ಈ ದಾಖಲೆಗಳು ಅಪೊಸ್ತಲರ ಕೃತ್ಯಗಳು 9ರೊಂದಿಗೆ ವಿಭೇದಿಸುತ್ತದೆ, ಅದರಲ್ಲಿ ಪೌಲನ ಉದ್ದೇಶವನ್ನು ತಿಳಿಸುತ್ತದೆ. ಸಮಯಕ್ಕನುಗುಣವಾಗಿ ಉಲ್ಲೇಖಿಸಲಾಯಿತು. ಈ ಮೂರು ದಾಖಲೆಗಳು ಒಂದಕ್ಕೊಂದು ಅನುಭಂದವಾಗಿದೆ. ಇವೆಲ್ಲವಗಳನ್ನು, ಪೌಲನ ಪರಿವರ್ತನೆಯ ಎರಡು ಪ್ರಸಂಗಗಳಲ್ಲಿ *ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದಲ್ಲಿ "ಸಾಮೂಹಿಕ ಕೊಲೆಗಾರನು ಮುಳುಗಿಸಲ್ಪಟ್ಟನು!" ಎಂಬ ಪಾಠದಲ್ಲಿ ಅಡಕವಾಗಿವೆ.

[21]ಪೌಲನು "ಪುನರುತ್ಥಾನ" ಎಂಬ ಪದವನ್ನು ಬಳಸಲಿಲ್ಲ, ಯೇಸು ಸತ್ತಿಲ್ಲ, ಆದ್ದರಿಂದ ಆತನು ಎಬ್ಬಿಸಲ್ಪಟ್ಟನು ಎಂದು ಪೌಲನು ಹೇಳಿದನೆಂದು ಆಲಿಸುವವರು ತಿಳಿದುಕೊಂಡರು. ಯೇಸುವಿನ ದೇಹವನ್ನು ಅಪಹರಿಸಲಾಯಿತು ಎಂದು ಯೆರೂಸಲೇಮಿನ ಅಧಿಕೃತ ವಾರ್ತೆಯಾಗಿತ್ತು (ಮತ್ತಾಯ 28:11-15). ಪೌಲನ ದಾಖಲೆಗಳು ಆ ಕಥೆಗೆ ಸುಳ್ಳಾಗಿರಬಹುದೆಂದು ತೋರಿಸುತ್ತದೆ - ಯಾರು ಕಂಡಿಸಲಿಲ್ಲ. [22]ಅನನೀಯನು ಕ್ರೈಸ್ತನಾಗಿದ್ದನು, ಪೌಲನು ತನ್ನ ಯೆಹೂದ್ಯ ಸ್ವಭಾವವನ್ನು ತಿಳಿಸಿದನು. [23]ಮೆಸ್ಸೀಯ "ನೀತಿವಂತನು" (ಅಪೊಸ್ತಲರ ಕೃತ್ಯಗಳು 3:14; 7:52; ಗಮನಿಸಿ ಯೆಶಾಯ 53:11). [24]ದೀಕ್ಷಾಸ್ನಾನದ ಆದೇಶಕ್ಕೆ ಪೌಲನು ಅವಿಧೇಯನಾಗಲಿಲ್ಲ (9:18). [25]ಅನ್ಯರು ಯೆಹೂದ್ಯರಾಗದೆ, ಕ್ರೈಸ್ತರಾಗಬಹುದು ಎಂಬ ಸಂದೇಶವನ್ನು ಹೇಳಿದ್ದರಿಂದ ಅವನು ದ್ವೇಷಕ್ಕೊಳಗಾದನು. [26]*ಅಪೊಸ್ತಲರ ಕೃತ್ಯಗಳು, 2ನೇ ಪುಸ್ತಕದಲ್ಲಿ* ಈ ದರ್ಶನದ ಬಗ್ಗೆ ಲೇಖಕರ ವ್ಯಾಖ್ಯಾನವನ್ನು "ನೂತನ ಕ್ರೈಸ್ತರಿಗೆ ಉಂಟಾಗುವ ಅಡ್ಡಿಗಳು" ಎಂಬ ಪಾಠದಲ್ಲಿ ಕಾಣಬಹುದು. [27]ಪೌಲ ಮತ್ತು ಪೇತ್ರನ ಜೀವಿತಕ್ಕೆ ಹೋಲಿಕೆ. [28]ಅವನ ಅನ್ಯರ ಸೇವೆಗೆ ಅಡ್ಡಿ ಮಾಡಿದ ಯೆಹೂದ್ಯರೊಂದಿಗೂ ಪೌಲನು ತರ್ಕಮಾಡಿದನು. [29]ಗ್ರೀಕ್‌ನ "ವಾಕ್ಯ" ಎಂಬ ಪದದ ಅರ್ಥ "ಹೇಳಿಕೆ" ಅವನು "ಅನ್ಯನು" ಎಂಬ ಪದಕ್ಕೆ "ವಾಕ್ಯದ" ಬದಲು "ಹೇಳಿಕೆ" ಎಂದು ತಿಳಿಯುತ್ತೇನೆ (KJV). [30]ಅವನನ್ನು ಹೊರಹಾಕು ಎಂದು ಜನರು ಕೂಗಿರಬಹುದು.

[31]J. W. McGarvey, *New Commentary on Acts of Apostles*, vol. 2 (Delight, Ark.: Gospel Light Publishing Co., n.d.), 220. [32]ಪೌಲನು ತನ್ನ ಕಾಲಿನ ದೂಳನ್ನು ಜಾಡಿಸಿದ ಕೃತ್ಯಕ್ಕೆ ಹೋಲಿಕೆಯಾಗಿದೆ (18:6; ಇದನ್ನು ನೋಡಿ 13:51). [33]ಪೌಲನು (ಗ್ರೀಕರನ್ನು) ಅನ್ಯರನ್ನು ಪರಿಶುದ್ಧ ಆಲಯದೊಳಗೆ ಕರಕೊಂಡು ಹೋದದ್ದೆ ಪೌಲನ ಮೇಲಿನ ಅರೋಪವಾಗಿತ್ತು. [34]ಈ "ವಿಚಾರವು" ಆತ್ಮೀಕವಾದ ಗಣಿಯಾಗಿರುತ್ತದೆ ಅವು ಗುಪ್ತವಾಗಿವೆ. ತಿಳಿಯದ ಮತ್ತು ತಿಳಿದ ವಿಷಯವಾಗಿರುವದರಿಂದ, ಒಬ್ಬ ಪ್ರಸಂಗಿಯು ಅದನ್ನು ಮುಟ್ಟುವಾಗ ಅರ್ಥವಾ ಗುತ್ತದೆ. [35]ಕೇಳುಗರಿಗೆ ಅನುಗುಣವಾಗಿ ಮಾತನಾಡಿ; ಸಮರ್ಪಿಸುವ ಆದ್ಯತೆ ನೀಡಿ, ನೈತಿಕ ಪಾಠ ಕಲಿಸಿರಿ. ಕೆಲವು ಮಾತುಗಳು ಸಭಿಕರನ್ನು ಕೆರಳಿಸಬಹುದು, ಆ ಬಲಹೀನತೆಗಳ ಕುರಿತು ಮಾತುಗಳನ್ನು ಇಷ್ಟಪಡದೆ ಇರಬಹುದು. ನಾವು ಅಪಾಯಕಾರಿ ಅಲ್ಲದ ಮಾತುಗಳನ್ನು ಬಳಸಿರುವೆವು. ಓದುಗರು ಪರಿವರ್ತನೆಗೆ ಸಮರ್ಪಿಸಿಕೊಳ್ಳಬೇಕು. [36]ಉತ್ತಮ ಅನುವಾದ ಮಾಡಬಹುದು. [37]"ಸತ್ಯವನ್ನು" ಒತ್ತಾಯ ಪೂರ್ವಕವಾಗಿ ಹೇಳಲಾಗಿರುತ್ತದೆ. [38]ಎರಡೂ ಕೈಗಳನ್ನು ಕಂಬಕ್ಕೆ ಕಟ್ಟುತ್ತಿದ್ದರು. ಅಗಬ್ಬನ ಪ್ರವಾದನೆಯ ಈಡೇರಿಕೆ (21:11). [39]ಹಗ್ಗಗಳಿಂದ ಅವನನ್ನು ಮೇಲೆತ್ತಿರಬಹುದು. [40]ಅಪೊಸ್ತಲರ ಕೃತ್ಯಗಳು 16ರಲ್ಲಿ ತನ್ನ ರೋಮಾಯದ ಹಕ್ಕನ್ನು ತಿಳಿಸಲಿಲ್ಲ.

[41]ಸಿಸೆರೂ ಹೇಳಿಕೆಯನ್ನು *ಅಪೊಸ್ತಲರ ಕೃತ್ಯಗಳು, 4ನೇ* ಪುಸ್ತಕದಲ್ಲಿ "ದೇವರ ಸಹಾಯದಿಂದ - ಜೀವಿತಗಳನ್ನು ಬದಲಾಯಿಸುವದು" ಎಂಬ ಪಾಠವನ್ನು ನೋಡಿರಿ. [42]ಅಪೊಕ್ರಿಪದ ಪ್ರಕಾರ ಪೌಲನು ಬೋಳನಾಗಿದ್ದನು, "ಕೈಕಾಲುಗಳು ತಿರುಚಿಕೊಂಡಿದ್ದವು ಮತ್ತು ಕುಳ್ಳನಾಗಿದ್ದನು, ದೊಡ್ಡ ಹುಬ್ಬುಗಳು ಹಾಗೂ ದೊಡ್ಡ ಮೂಗನ್ನು ಹೊಂದಿದ್ದನು." W. M. Ramsayರ ಪ್ರಕಾರ, "ಈ ಸರ್ವಸಾದಾರಣವಾದ ಅಪೊಸ್ತಲನ ವೈಯಕ್ತಿಕ ಕಾಣಿಸಿಕೊಳ್ಳುವಿಕೆ ಬಹಳ ಪ್ರಾಚೀನವಾದ ಸಂಪ್ರದಾಯವೆಂದು" ಹೇಳುತ್ತಾರೆ. [43]ಮೂರನೆಯ ಸಾರಿ ಬಂಧಿತನಾದವನಿಗೆ, ಮೂರು ಸಾರಿ ಕಳಕೊಂಡವನು ಎಂದು ಅಮೆರಿಕೆಯಲ್ಲಿ ಹೇಳುವರು. [44]ಅವನ ವಾಕ್ಯದಲ್ಲಿ ಆಶ್ಚರ್ಯವಿದೆ. [45]ರೋಮಾಯದಲ್ಲಿ ಹುಟ್ಟಿದವರು ಅದರ ಹಕ್ಕನ್ನು ಹೊಂದಿರುವರು. ಲಂಚ ಕೊಡುವದರಿಂದಲೂ ಪಡೆಯಬಹುದು. ಸಹಸ್ರಾಧಿಪತಿ ಅದನ್ನೇ ಮಾಡಿದ್ದನು, ಅವನ ಮೊದಲ ಹೆಸರು ಕ್ಲೌದ್ಯನು (23:26) ಕ್ಲಾದ್ಯ ಅರಸನ ಕಾಲದಲ್ಲಿ ಅವನು ಆ ಹಕ್ಕನ್ನು ಪಡೆದಿದ್ದನು (ಕ್ರಿ.ಶ. 41-54). [46]ಹಕ್ಕಿನ ಕುರಿತ ಪೌಲನ ಎರಡನೆಯ ಹೇಳಿಕೆ (ಪ್ರಥಮ ಹೇಳಿಕೆ 16:37). 25:11ರಲ್ಲಿ ಮೂರನೆಯ ಹೇಳಿಕೆ. ಸ್ವಂತ ಲಾಭಕ್ಕೆ ಬಳಸದೆ, ಕ್ರಿಸ್ತನಿಗಾಗಿ ಬಳಸಿದನು. ಕರ್ತನ ಚಿತ್ತದ ಪ್ರಕಾರ ಸಾಯಲು ಸಿದ್ಧವಾಗಿದ್ದನು (ಅಪೊಸ್ತಲರ ಕೃತ್ಯಗಳು 21:13; ಫಿಲಿಮೋನ 1:21, 23). ಅನಗತ್ಯವಾಗಿ ಅದಕ್ಕೆ ಒಪ್ಪಿಕೊಡಲಿಲ್ಲ. [47]ಲಂಚದಿಂದ ಇತರರೂ ಈ ಹಕ್ಕನ್ನು ಪಡೆದಿರಬಹುದು. [48]ಹೊಸ ಒಡಂಬಡಿಕೆಗೆ ಹೋಲಿಕೆಯಾಗಿರುವ ಗುರುತಿನ ಚೀಟಿ ಪೌಲನ ಬಳಿ ಇದ್ದಿರಬಹುದು. [49]McGarvey, 221-22. [50]ರೋಮಾ ಹಕ್ಕುದಾರನನ್ನು

ಬಂಧಿಸುವದು ಅಪರಾಧ ಎಂದು ಸಿಸೆರೋ ತಿಳಿಸಿರುವನು, ಪೌಲನು ರೋಮಾಯದಲ್ಲಿ ಎರಡು ವರ್ಷಗಳ ಕಾಲ ತಂಗಿದ್ದನು (28:20). ಚಡಿಗಳ ಏಟನ್ನು ಹೊಂದಲು ಪೌಲನು ಕಟ್ಟಲ್ಪಿದ್ದನು (22:24). ವಚನ 29ರಲ್ಲಿ, "ಅವನು ಬಂಧನಕ್ಕೊಳಗಾದನು" ಎಂಬುದಾಗಿದೆ.

[51]ಹೊಡೆದ ನಂತರ ಅಪರಾಧಿಯು ಸತ್ಯವನ್ನು ಹೇಳಬಹುದು. [52]Rick Atchley, "Apologizing to an Uprising," Sermon preached at Southern Hills church of Christ, Abilene, Texas, on 1 March 1987. [53]ಓದುಗರಿಗೆ ಅನುಗುಣವಾಗಿ ಇದನ್ನು ಪುನರ್ವಿಮರ್ಶಿಸಬಹುದು.